www.janavaadi.in

# ಜನವಾದಿ

ರಾಯಚೂರು
ಕಲಬುರಗಿ
ಯಾದಗಿರಿ
ಕೊಪ್ಪಳ
ಬಳ್ಳಾರಿ
ಬೀದರ್

ಸಂಪಾದಕ : ಬಸವರಾಜ ಹೆಚ್
Editor : Basavaraj H

ಜನರ ಅಂತರಂಗದ ಧ್ವನಿ
ಕನ್ನಡ ದಿನಪತ್ರಿಕೆ

JANAVAADI
Kannada Daily News Paper

ಸಂಪುಟ : 12 ಸಂಚಿಕೆ : 07 ಪುಟ:4 ರಾಯಚೂರು ಶನಿವಾರ 02-08-2025 RNI NO.KARKAN/2012/56428 ಮೊಬೈಲ್: 9448300139,9449711232. e-mail : janavaadi@gmail.com ಬೆಲೆ : 2 ರೂ.

VOLUME : 12 ISSUE : 07 PAGES : 4 RAICHUR SATURDAY 02-08-2025 RNI NO.KARKAN/2012/56428 MOBILE:9448300139,9449711232. E-MAIL:janavaadi@gmail.com PRICE : 2 RS.

## ವಾಣಿಜ್ಯ ಗ್ಯಾಸ್ ಸಿಲಿಂಡರ್ ಬೆಲೆಯಲ್ಲಿ 33.50ರೂ. ಇಳಿಕೆ

ನವದೆಹಲಿ ಆ 1– ತೈಲ ಸಂಸ್ಥೆಗಳು 19 ಕೆಜಿ ತೂಕದ ಎಲ್‌ಪಿಜಿ ವಾಣಿಜ್ಯ ಸಿಲಿಂಡರ್ ಬೆಲೆಯಲ್ಲಿ 33.50ರೂ.ನಷ್ಟು ಕಡಿತ ಮಾಡಿವೆ. 19 ಕೆಜಿ ವಾಣಿಜ್ಯ ಸಿಲಿಂಡರ್‌ಗಳ ಬೆಲೆಯನ್ನು ಪ್ರತಿ ಸಿಲಿಂಡರ್‌ಗೆ 33.50 ರೂ.ಗಳಷ್ಟು ಕಡಿಮೆ ಮಾಡಲಾಗಿದೆ. ಕೋಲ್ಕತ್ತಾ ಮತ್ತು ಚೆನ್ನೈನಲ್ಲಿ ಅತಿ ಹೆಚ್ಚು ಕಡಿತ ಮಾಡಲಾಗಿದೆ. ಆದರೆ 14.2 ಕೆಜಿ ಸಿಲಿಂಡರ್‌ಗಳ ಬೆಲೆಯಲ್ಲಿ ಯಾವುದೇ ಬದಲಾವಣೆ ಇಲ್ಲ ಎಂದು ತಿಳಿದುಬಂದಿದೆ.

19 ಕೆಜಿ ಎಲ್‌ಪಿಜಿ ಸಿಲಿಂಡರ್ ಈಗ ಪ್ರತಿ ಸಿಲಿಂಡರ್‌ಗೆ 1,800 ರೂ.ಗಳಿಗಿಂತ ಕಡಿಮೆಯಿದ್ದರೆ, ದೆಹಲಿಯಲ್ಲಿ ಇದರ ಬೆಲೆ ಪ್ರತಿ ಸಿಲಿಂಡರ್‌ಗೆ 1,650 ರೂ.ಗಳಿಗಿಂತ ಕಡಿಮೆಯಿದೆ. ಇದಲ್ಲದೆ, ಮುಂಬೈನಲ್ಲಿಯೂ ಈ ಗ್ಯಾಸ್ ಅಗ್ಗವಾಗಿದೆ ಏಕೆಂದರೆ ಅದರ ಬೆಲೆ ಪ್ರತಿ ಸಿಲಿಂಡರ್‌ಗೆ 1,600 ರೂ.ಗಳಿಗಿಂತ ಕಡಿಮೆಯಿದೆ.

ಬೆಂಗಳೂರಿನಲ್ಲಿ 19 ಕೆಜಿ ವಾಣಿಜ್ಯ ಸಿಲಿಂಡರ್ ಬೆಲೆ 1,738 ರೂ. ಇದೆ. ರಾಷ್ಟ್ರ ರಾಜಧಾನಿ ದೆಹಲಿಯಲ್ಲಿ 19 ಕೆಜಿ ಎಲ್‌ಪಿಜಿ ಸಿಲಿಂಡರ್‌ನ ಬೆಲೆ ಆಗಸ್ಟ್ 1, 2025 ರಿಂದ ಪ್ರತಿ ಸಿಲಿಂಡರ್‌ಗೆ 33.5 ರೂ.ಗಳಷ್ಟು ಇಳಿದು 1,631.5 ರೂ.ಗಳಿಗೆ ತಲುಪಿದೆ. ಕಳೆದ ತಿಂಗಳು ಇದರ ಬೆಲೆ ಪ್ರತಿ ಸಿಲಿಂಡರ್‌ಗೆ 1,665 ರೂ.ಗಳಷ್ಟಿತ್ತು. ಕೋಲ್ಕತ್ತಾದಲ್ಲಿ ಆಗಸ್ಟ್ 2025 ರಲ್ಲಿ 19 ಕೆಜಿ ಸಿಲಿಂಡರ್ ಬೆಲೆ 34.5 ರೂ.ಗಳಷ್ಟು ಇಳಿದು 1,734.5 ರೂ.ಗಳಿಗೆ ತಲುಪಿದೆ, ಆದರೆ ಕಳೆದ ತಿಂಗಳು ಪ್ರತಿ ಸಿಲಿಂಡರ್ ಬೆಲೆ 1,769 ರೂ.ಗಳಷ್ಟಿತ್ತು.

# ಮಾನ್ವಿ ತಾಲೂಕಿನ ಮುಂದಿನ ಭರವಸೆಯ ನಾಯಕ ಸೈಯಾದ್ ಖಾಲೀದ್ ಖಾದ್ರಿ ಗುರು


## ಜನ-ಮನ ಮೆಚ್ಚಿದ ನಾಯಕನಿಗೆ 51 ನೇ ಹುಟ್ಟು ಹಬ್ಬದ ಸಂಭ್ರಮ

ಮಾನ್ವಿ: ಪಟ್ಟಣದ ಜುಮ್ಮಲದೊಡ್ಡಿಯಲ್ಲಿನ ದರ್ಗಾ ಶರೀಫ್ ಹಜರತ್ ಸೈಯಾದ್ ಷಾ ಮುರ್ತುಜಾ ಖಾದ್ರಿಯವರ ದರ್ಗಾ ಎಂದರೆ ಪಟ್ಟಣದ ಮುಸ್ಲಿಂ ಸಮುದಾಯ ಹಾಗೂ ಹಿಂದೂ ಸಮುದಾಯಗಳ ಭಾವೈಕ್ಯತೆಯ ಹಾಗೂ ಸಾಮರಸ್ಯದ ಕೇಂದ್ರವನ್ನಾಗಿ ಹಲವು ದಶಕಗಳಿಂದ ಹಿರಿಯರಾದ ಸೈಯಾದ್ ಪಾಷಾ ಹುಸೇನಿ ಖಾದ್ರಿ ಸಾಹೇಬ್ ಹಾಗೂ ಸೈಯಾದ್ ಮಹಮೂದ್ ಖಾದ್ರಿ ಸಾಹೇಬ್ ರವರು ನಡೆಸಿಕೊಂಡು ಬಂದಿದ್ದಾರೆ.

ಪ್ರಸ್ತುತ ಸೈಯದ್ ಖಾಲೀದ್ ಖಾದ್ರಿ ಗುರುರವರು ದರ್ಗಾದ ಪರಂಪರೆಯನ್ನು ಉಳಿಸಿ ಬೆಳೆಸಿ ಕೊಂಡು ಹೋಗುತ್ತಿದ್ದಾರೆ.

ದರ್ಗಾ ಶರೀಫ್ ಹಜರತ್ ಸೈಯಾದ್ ಷಾ ಮುರ್ತುಜಾ ಖಾದ್ರಿಯವರ ದರ್ಗಾ ಅಸ್ಥಾನದ ಸೈಯಾದ್ ಪಾಷಾ ಹುಸೇನಿ ಖಾದ್ರಿ ಸಾಹೇಬ್ ರವರ ಮೆಚ್ಚಿನ ಮೊಮ್ಮಗ ಸೈಯಾದ್ ಖಾಲೀದ್ ಖಾದ್ರಿ ಗುರು ರವರು 1924 ರಲ್ಲಿ ಮಾನ್ವಿಯ ದರ್ಗಾ ಶರೀಫ್ ಹಜರತ್ ಸೈಯಾದ್ ಷಾ ಮುರ್ತುಜಾ ಖಾದ್ರಿಯವರ ಗುರುಗಳ ಕುಟುಂಬದಲ್ಲಿ ಜನಿಸಿದ್ದು ಅವರ ಅಭಿಮಾನಿಗಳು ಅವರ 51 ನೇ ಹುಟ್ಟು ಹಬ್ಬವನ್ನು ಅ.2 ರಂದು ಶನಿವಾರ ಅದ್ದೂರಿಯಾಗಿ ಹಾಗೂ ಅರ್ಥ ಪೂರ್ಣವಾಗಿ ಆಚರಿಸುವುದಕ್ಕೆ ಸಿದ್ದತೆಗಳನ್ನು ಮಾಡಿಕೊಳ್ಳುತ್ತಿದ್ದಾರೆ.

ಸೈಯಾದ್ ಖಾಲೀದ್ ಖಾದ್ರಿ ಗುರು ರವರು ಭೂಮಾಲೀಕರ ಕುಟುಂಬದಲ್ಲಿ ಜನಿಸಿ ತಮ್ಮ ಹಿರಿಯರಿಂದ ಬಳುವಳಿಯಾಗಿ ಬಂದ ಕೃಷಿಯೊಂದಿಗೆ ರಾಜಕೀಯ,ಧಾರ್ಮಿಕ ಕಾರ್ಯಕ್ರಮ,ಜನಸೇವೆ,ಸಾಮಾಜಿಕ ಚಟುವಟಿಕೆಗಳ ಮೂಲಕ ತಮ್ಮನ್ನು ತಾವು ಗುರುತಿಸಿಕೊಂಡಿದ್ದಾರೆ. ಸಮಾಜದಲ್ಲಿ ಯಾರೇ ಅಗಲಿ ಕಷ್ಟ ಎಂದು ಇವರ ಬಳಿ ಹೇಳಿಕೊಂಡಲ್ಲಿ ತಕ್ಷಣವೇ ಸ್ಪಂದಿಸುವ ಗುಣ ಇವರದ್ದು. ಸಿವಿಲ್ ಇಂಜಿನೇಯರಿಂಗ್ ವಿಭಾಗದಲ್ಲಿ ಶಿಕ್ಷಣ ಪೂರೈಸಿದರು ಕೂಡ ಇವರ ನೆಚ್ಚಿನ ಕ್ಷೇತ್ರ ಕೃಷಿ ಹಾಗೂ ರಾಜಕೀಯವಾಗಿದೆ . ಯುವಕರಾಗಿದ್ದಾಗಲೇ ಇವರ ಸಂಘಟನಾ ಶಕ್ತಿ,ಚತುರತೆ, ಜನರನ್ನು ಸೆಳೆಯುವ ಕಲೆಯನ್ನು ಗುರುತಿಸಿದ ಕಾಂಗ್ರೆಸ್ ಪಕ್ಷವು ಇವರನ್ನು ಕೈ ಬೀಸಿ ಕರೆಯಿತು 2009 ರಲ್ಲಿ ಕಾಂಗ್ರೇಸ್ ಐ. ಪಕ್ಷದ ಮೂಲಕ ರಾಜಕೀಯ ಕ್ಷೇತ್ರವನ್ನು ಪ್ರವೇಶಿಸಿದ ಇವರು ಅಂದಿನ ಮಾನ್ವಿಯ ಡೈನಾಮಿಕ್ ಲೀಡರ್




ಹಾಲಿ ರಾಜ್ಯ ಸಣ್ಣ ನೀರಾವರಿ ಹಾಗೂ ವಿಜ್ಞಾನ ತಂತ್ರಜ್ಞಾನ ಸಚಿವರಾದ ಎನ್.ಎಸ್.ಬೋಸರಾಜು ರವರ ಅಪ್ತ ವಲಯದಲ್ಲಿ ಸೇರಿಕೊಂಡು ತಮ್ಮನ್ನು ಗುರುತಿಸಿಕೊಂಡವರು. ಇವರ ಪಕ್ಷ ನಿಷ್ಠೆಯಿಂದಾಗಿ ಇವರಿಗೆ ಮಾನ್ವಿ ತಾಲೂಕು ಯೂತ್ ಕಾಂಗ್ರೆಸ್ ಅಧ್ಯಕ್ಷ ಹುದ್ದೆ ಒಲಿದು ಬಂತು ನಂತರ ಜಿಲ್ಲಾ ಕಾಂಗ್ರೆಸ್ ಘಟಕದ ಕಾರ್ಯದರ್ಶಿಯವರೆಗೂ ಇವರು ಪಕ್ಷದಲ್ಲಿ ಬೆಳೆದು ಬಂದ ಪರಿ ಇವರಿಗೆ ಪಕ್ಷದ ಬಗ್ಗೆ ಇರುವ ನಿಷ್ಠೆಯನ್ನು ತೋರಿಸುತ್ತದೆ. ಕೋವಿಡ್ ನಂತಹ ಸಂಕಷ್ಟದ ಸಂದರ್ಭದಲ್ಲಿ ಹಜರತ್ ಸೈಯಾದ್ ಷಾ ಮುರ್ತುಜಾ ಖಾದ್ರಿ ಟ್ರಸ್ಟ್ ಹಾಗೂ ಹೆಲ್ಪಿಂಗ್ ಹ್ಯಾಂಡ್ಸ್ ಎನ್ನುವ ಸಂಘಟನೆಯ ಮೂಲಕ ಸಮಾನ ಮಾನಸ್ಕಾರ ಜೊತೆ ಸೇರಿಕೊಂಡು ಸಂಕಷ್ಟದಲ್ಲಿದ ಸಾವಿರಾರು ಕುಟುಂಬಗಳಿಗೆ ಅಹಾರ ಪದಾರ್ಥಗಳ ಕಿಟ್ ಗಳನ್ನು ಉಚಿತವಾಗಿ ನೀಡುವ ಮೂಲಕ ಬಡವರ ಕಷ್ಟದಲ್ಲಿ ತಾವು ಕೂಡ ಭಾಗಿಯಾಗಿದ್ದಾರೆ. ಸಮಾಜದಲ್ಲಿನ ಬಡವರಿಗಾಗಿ ಅನೇಕ ಉಚಿತ ಆರೋಗ್ಯ ತಪಾಸಣೆ ಹಾಗೂ ಚಿಕಿತ್ಸೆ ನೀಡುವ ಶಿಬಿರಗಳ ಆಯೋಜನೆ, ಉಚಿತ ನೇತ್ರ ಶಸ್ತ್ರ ಚಿಕಿತ್ಸೆ ಶಿಬಿರಗಳ ಆಯೋಜನೆ ಮೂಲಕ ಬಡಜನರು ಕೂಡ ಉತ್ತಮ ಆರೋಗ್ಯ ಪಡೆಯುವಂತೆ ಮಾಡಿದ್ದಾರೆ.

ಇಸ್ಲಾಂ ಧಾರ್ಮದ ರಾಷ್ಟ್ರಮಟ್ಟದ ಧಾರ್ಮಿಕ ಗುರುಗಳು ಪಟ್ಟಣಕ್ಕೆ ಆಗಮಿಸಿದಾಗ 20 ರಿಂದ 30 ಸಾವಿರ ಮುಸ್ಲಿಂ ಸಮುದಾಯದವರಿಗೆ ಅಚ್ಚುಕಟ್ಟದ ವ್ಯವಸ್ಥೆಮಾಡುವಲ್ಲಿ ಇವರ ಶ್ರಮ ಕೂಡ ಅಪಾರವಾಗಿದೆ. ಸಮಾಜದ ಎಲ್ಲಾ ಧರ್ಮದ ಸಭೆ ಸಮಾರಂಭಗಳಲ್ಲಿ ಭಾಗವಹಿಸುವ ಇವರು ಅಲ್ಪ ಸಂಖ್ಯಾತ ಸಮುದಾಯಕ್ಕೆ ಅನ್ಯಾಯವಾದಗ ಹಾಗೂ ಕಾಂಗ್ರೇಸ್ ಪಕ್ಷದ ನಾಯಕರು ಪ್ರತಿಭಟನೆಗೆ ಕರೆ ನೀಡಿದಲ್ಲಿ ಹಾಗೂ ಪಟ್ಟಣದ ಜನರಿಗೆ ಕುಡಿಯುವ ನೀರು, ರೈತರಿಗೆ ವಿದ್ಯುತ್ ಸಮಸ್ಯೆಗಳಿಗಾಗಿ ಹೋರಾಟಕ್ಕೂ ಸೈ ಎಂದು ಅನೇಕ ಪ್ರತಿಭಟನೆಗಳಲ್ಲಿ ಭಾಗವಹಿಸಿದ್ದಾರೆ. ಪಟ್ಟಣದ ಬೆಳಗಿನ ಪೇಟೆ , ಜುಮ್ಮಲದೊಡ್ಡಿ ಸೇರಿದಂತೆ ಅನೇಕ ವಾರ್ಡಗಳ ಜನರ ಕುಡಿಯುವ ನೀರಿನ ಆಸರೆಯಾಗಿರುವ ಜುಮ್ಮಲದೊಡ್ಡಿ ನಿಜಾಂ ಕೆರೆ ಅಭಿವೃದ್ದಿಗೆ ಶ್ರಮಿಸಿದ್ದಾರೆ. ತಮ್ಮಗಾಗಿ ಯಾವ ಪದವಿಯನ್ನು ಆಶಿಸದೆ ಇರುವ ಇವರು ತಮ್ಮ ಪಕ್ಷದ ಗ್ರಾಮ ಪಂಚಾಯಿತಿ ಮಟ್ಟದಿಂದ ಹಿಡಿದು ಲೋಕಸಭಾ ಅಭ್ಯಾರ್ಥಿ,ವಿಧಾನಸಭಾ ಅಭ್ಯಾರ್ಥಿ,ಪುರಸಭೆ ಅಭ್ಯರ್ಥಿ,ತಾಲೂಕು ಪಂಚಾಯಿತಿ, ಜಿಲ್ಲಾ ಪಂಚಾಯಿತಿ ಅಭ್ಯರ್ಥಿಗಳವರೆಗಿನ ಗೇಲುವಿಗೆ ಸಕ್ರಿಯವಾಗಿ ತಮ್ಮನ್ನು ತೊಡಗಿಸಿಕೊಳ್ಳುತ್ತಾರೆ. ಇಂತಹ ಸಮಜಮುಖಿ , ಸರಳ,ಸ್ನೇಹಮಯಿ ಸೈಯಾದ್ ಖಾಲೀದ್ ಖಾದ್ರಿ ಗುರು ರವರು ಇನ್ನೂ ಹೆಚ್ಚಿನ ಹುಟ್ಟು ಹಬ್ಬಗಳನ್ನು ಆಚಾರಿಸಿಕೊಳ್ಳಲ್ಲಿ ಹಾಗೂ ಇವರ ಪಕ್ಷ ನಿಷ್ಠೆಯನ್ನು ಕಾಂಗ್ರೇಸ್ ಹೈಕಮಂಡ್ ಹಾಗೂ ಜಿಲ್ಲೆಯ ಹಿರಿಯ ನಾಯಕರು ಗುರುತಿಸಿ ಮುಂದಿನ ದಿನಗಳಲ್ಲಿ ಇವರಿಗೆ ಉನ್ನತವಾದ ಸ್ಥಾನಮಾನ ಹಾಗೂ ಅಧಿಕಾರ ನೀಡಲಿ ಎಂದು ಅಭಿಮಾನಿಗಳು ಅಶಿಸುತ್ತಾರೆ.





# ಲೆಕ್ಕಪರಿಶೋಧಕರಾಗಲು ನಿರಂತರ ಅಧ್ಯಯನ, ಶ್ರಮ, ಛಲ ಅಗತ್ಯ- ವಿನುತ ಪಿ. ಶಿವರಾಜಪ್ಪ

ಜನವಾದಿ ವಾರ್ತೆ




ರಾಯಚೂರು ಆ 1- ನಗರದ ಪ್ರತಿಷ್ಠಿತ ಸರ್ಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜು ರಾಯಚೂರುನಲ್ಲಿ ಒಂದು ದಿನದ ವಿಶೇಷ ಉಪನ್ಯಾಸ ಕಾರ್ಯಕ್ರಮವನ್ನು ದಿನಾಂಕ : 31-07-2025 ರಂದು " ಲೆಕ್ಕ ಪತ್ರ ನಿರ್ವಹಣೆ, ಲೆಕ್ಕ ಪರಿಶೋಧನೆ ಮತ್ತು ತೆರಿಗೆಯ ಪ್ರಾಯೋಗಿಕತೆಗಳು" ಕುರಿತು ಆಂತರಿಕ ಗುಣಮಟ್ಟ ಭರವಸೆ ಕೋಶ ಹಾಗೂ ವಾಣಿಜ್ಯಶಾಸ್ತ್ರದ ವಿಭಾಗದ ವತಿಯಿಂದ ವಿಶೇಷ ಉಪನ್ಯಾಸ ಆಯೋಜಿಸಲಾಗಿತ್ತು.

ಈ ಕಾರ್ಯಕ್ರಮಕ್ಕೆ ಮುಖ್ಯ ಸಂಪನ್ಮೂಲ ವ್ಯಕ್ತಿಗಳಾಗಿ ಶ್ರೀಮತಿ ವಿನುತ ಪಿ. ಶಿವರಾಜಪ್ಪ ಲೆಕ್ಕಪ-ರಿಶೋಧಕಿ ಮುಖ್ಯಸ್ಥರು ಹಾಗೂ ಮುಖ್ಯ ಹಣಕಾಸು ಅಧಿಕಾರಿಗಳು ಜಇಔ-ಒಂಓ ೦ಉಖಔಗಿಇಓಖಿಗಖಇಖ ಕಖಖಗಿಂಖಿಇ ಐಖಒಖಖಿಇಆ ಃಇಓಉಂಐಗಖಿಗಳಆಗಮಿಸಿ ವಿಶೇಷ ಉಪನ್ಯಾಸ ಮಂಡಿಸಿದರು. ತಮ್ಮ ವಿಷಯದಲ್ಲಿ ಪ್ರಸುತ್ತ ವಿದ್ಯಮಾನದಲ್ಲಿ ಲೆಕ್ಕಪತ್ರನಿರ್ವಹಣೆ, ಲೆಕ್ಕಪರಿಶೋಧನೆ ಮತ್ತು ತೆರಿಗೆಯ ಪ್ರಾಯೋಗಿಕತೆಗಳ ಬಳಕೆ ಮತ್ತು ಅದರ ಮಹತ್ವದ ಕುರಿತು ಸವಿಸ್ತಾರವಾಗಿ ವಿವ-ರಿಸಿದರು. ಅದೇ ರೀತಿಯಾಗಿ ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ ಕಾಲೇಜಿನ ಪ್ರಾಚಾರ್ಯರಾದ ಡಾ॥ ಸುಗುಣ ಬಸವರಾಜರವರು ಮಾತನಾಡಿ ವಾಣಿಜ್ಯಶಾಸ್ತ್ರ ವಿಭಾಗದ ವಿದ್ಯಾರ್ಥಿನಿಯರಿಗೆ ಲೆಕ್ಕಪರಿಶೋಧಕ ಹುದ್ದೆಯ ವಿಷಯದ ಮಹತ್ವ, ಅದರ ಕಠಿಣತೆ, ಪರಿಶ್ರಮ ಹಾಗೂ ಅದಕ್ಕೆ ಬೇಕಾಗಿರುವ ಮಾರ್ಗೋಪಾಯಗಳು ಕುರಿತು ವಿವರಿಸಿದರು.

ಈ ಕಾರ್ಯಕ್ರಮವು ಕುಮಾರಿ ಸುವರ್ಣ ಮತ್ತು ಮಮತಾ ಬಿ.ಕಾಂ ಅಂತಿಮ ವರ್ಷದ ವಿಧ್ಯಾರ್ಥಿನಿಯರು ಪ್ರಾರ್ಥಿಸಿದರೆ, ಅದೇ ರೀತಿಯಾಗಿ ಕ್ರಮವಾಗಿ ಕಾರ್ಯಕ್ರಮದ ಸ್ವಾಗತ, ಪ್ರಾಸ್ತವಿಕ ನುಡಿ, ಮುಖ್ಯ ಅಥಿ-ತಿಯ ಪರಿಚಯ ವಂದರ್ನಾಪಣೆ, ನಿರೂಪಣೆಯನ್ನು ಕ್ರಮವಾಗಿ ಡಾ. ಉಮಾದೇವಿ. ಸಹ ಪ್ರಾಧ್ಯಪಕರು, ಡಾ.ಜ್ಯೋತಿ ಸಿ.ಕೆ ಖಿಕಿಂಅ ಸಂಚಾಲಕರು, ಡಾ.ಸ್ವರೂಪರಾಣಿ ವಾಣಿಜ್ಯಶಾಸ್ತ್ರಮುಖ್ಯಸ್ಥರು ಹಾಗೂ ಸಹ ಪ್ರಾಧ್ಯಪಕರು, ಡಾ. ಶರಣ ಗೌಡ IQAC ಸಹ-ಸಂಚಾಲಕರು, ಹಾಗೂ ಬಸವರಾಜ ಎಸ್.ಯು ವಾಣಿಜ್ಯಶಾಸ್ತ್ರ ಉಪನ್ಯಾಸಕರು ನಿರ್ವಹಿಸಿದರು.

ಈ ಕಾರ್ಯಕ್ರಮದಲ್ಲಿ ಬಿ.ಕಾಂ ವಿಧ್ಯಾರ್ಥಿನಿಯರು ಹಾಗೂ ಕಾಲೇಜಿನ ಭೋಧಕ-ಭೋಧಕೇತರ ಸಿಬ್ಬಂದಿಯುವರು ಹಾಜರಿದ್ದು ಯಶ್ವಸಿಗೊಳಿಸಿದರು.

# ಸಿಎಂ ಕಾರ್ಯಕ್ರಮದ ಪೂರ್ವಭಾವಿ ಸಭೆಯಲ್ಲಿ ಅಪರ ಜಿಲ್ಲಾಧಿಕಾರಿಗಳ ಸೂಚನೆ ಶಿಷ್ಟಾಚಾರ ಉಲ್ಲಂಘನೆಯಾಗದಂತೆ ಕಾರ್ಯಕ್ರಮಕ್ಕೆ ಶಿಸ್ತುಬದ್ಧ ಸಿದ್ಧತೆಯಾಗಲಿ

ಜನವಾದಿ ವಾರ್ತೆ



ರಾಯಚೂರ ಆ 01 - ಮಾನ್ಯ ಮುಖ್ಯಮಂತ್ರಿಗಳಾದ ಸಿದ್ದರಾಮಯ್ಯ ಅವರು ಆಗಸ್ಟ್ 6ರಂದು ಜಿಲ್ಲೆಯ ಹಟ್ಟಿ ಚಿನ್ನದ ಗಣಿ ಕಂಪನಿ ಆವರಣಕ್ಕೆ ಆಗಮಿಸಿ ಶಂಕುಸ್ಥಾಪನೆ ಮಾಡಲಿರುವ ಕಾರ್ಯಕ್ರಮವು ಲೋಪದೋಷಗಳು ಆಗದಂತೆ ಶಿಷ್ಟಾಚಾರದಂತೆ ನಡೆಯಲು ಜಾಗೃತೆ ವಹಿಸಿ ಸಿದ್ಧತೆ ಸಿದ್ಧತೆ ಮಾಡಿಕೊಳ್ಳಬೇಕು ಎಂದು ಅಪರ ಜಿಲ್ಲಾಧಿಕಾರಿಗಳಾದ ಶಿವಾನಂದ ಅವರು ಹಟ್ಟಿ ಚಿನ್ನದ ಗಣಿ ಕಂಪನಿಯ ಅಧಿಕಾರಿಗಳಿಗೆ ಮತ್ತು ವಿವಿಧ ಇಲಾಖೆಯ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಆಗಸ್ಟ್ 01ರ ಶುಕ್ರವಾರ ಜಿಲ್ಲೆಯ ಲಿಂಗಸುಗೂರು ತಾಲೂಕಿನ ಹಟ್ಟಿ ಚಿನ್ನದ ಗಣಿ ಕಂಪನಿಯ ಆಡಳಿತ ಕಚೇರಿಯ ಸಭಾಂಗಣದಲ್ಲಿ ಕಾರ್ಯಕ್ರಮದ ಪೂರ್ವಭಾವಿ ಸಿದ್ಧತಾ ಸಭೆ ನಡೆಸಿ ಅವರು ಮಾತನಾಡಿದರು.

ಕಾರ್ಯಕ್ರಮಕ್ಕೆ ಆಗಮಿಸುವ ಮುಖ್ಯಮಂತ್ರಿಗಳು, ಉಪ ಮುಖ್ಯಮಂತ್ರಿಗಳು, ಸಚಿವರು, ಶಾಸಕರು, ನಿಗಮ, ಸಮಿತಿ, ಪ್ರಾಧಿಕಾರದ ಅಧ್ಯಕ್ಷರು, ಹಿರಿಯ ಮುಖಂಡರು, ಗಣ್ಯರು, ಹಿರಿಯ ಅಧಿಕಾರಿಗಳು ಮತ್ತು ಇನ್ನಿತರ-ರಿಗೆ ಶಿಷ್ಟಾಚಾರದಂತೆ ಆಸನದ ವ್ಯವಸ್ಥೆಯಾಗಬೇಕು.

ಸಮಾರಂಭದಲ್ಲಿ ಗೊಂದಲಕ್ಕೆ ಅವಕಾಶವಿಲ್ಲದಂತೆ ಸ್ವಾಗತ ಭಾಷಣ, ಸನ್ಮಾನ, ಸ್ಮರಣಿಕೆ ವಿತರಣೆ, ಸೌಲಭ್ಯಗಳ ವಿತರಣೆ ಎಲ್ಲವೂ ಅಚ್ಚುಕಟ್ಟಾಗಿ ನಡೆಯುವಂತೆ ನೋಡಿಕೊಳ್ಳಬೇಕು. ಕಂಪನಿಯ ಅಧಿಕಾರಿಗಳು ಮುಂಚಿತವಾಗಿ ಕಾರ್ಯಕ್ರಮದ ವಿವರದ ಪಟ್ಟಿ ತಯಾರಿಸಿ ಅದಕ್ಕೆ ಸಿದ್ದತೆ ಮಾಡಿಕೊಳ್ಳಬೇಕು ಎಂದು ಅಪರ ಜಿಲ್ಲಾಧಿಕಾರಿಗಳು ಸೂಚನೆ ನೀಡಿದರು.

ಕಾರ್ಯಕ್ರಮಕ್ಕೆ ಹಟ್ಟಿ ಚಿನ್ನದ ಗಣಿ ಕಂಪನಿಯ ಅಧಿಕಾರಿಗಳು, ಸಿಬ್ಬಂದಿ, ಕಂಪನಿಯ ಕಾರ್ಮಿಕರು, ಕಾರ್ಮಿಕರ ಕುಟುಂಬ ವರ್ಗದವರು ಸೇರಿದಂತೆ ಹಟ್ಟಿ, ಲಿಂಗಸಗೂರು, ಸಿರವಾರ ಸೇರಿದಂತೆ ಬೇರೆ ಬೇರೆ ಕಡೆಯಿಂದ ಆಗಮಿಸುವ ಸಾರ್ವಜನಿಕ-ರಿಗೆ ಸರಿಯಾದ ರೀತಿಯಲ್ಲಿ ಊಟ ಉಪಹಾರ ಸಿದ್ಧತಾ ಕಾರ್ಯವನ್ನು ಈಗಿನಿಂದಲೇ ಆರಂಭಿಸಬೇಕು. ಸುಗಮ ಸಂಚಾರಕ್ಕೆ ಅನುಕೂಲವಾಗುವಂತೆ ಹೆಚ್ಚಿನ ಸಂಖ್ಯೆಯಲ್ಲಿ ವಾಹನಗಳ ವ್ಯವಸ್ಥೆಗೆ ಏರ್ಪಾಡು ಮಾಡಬೇಕು ಎಂದು ಸೂಚನೆ ನೀಡಿದರು.

ಕಾರ್ಯಕ್ರಮಕ್ಕೆ ಸಂಬಂಧಿಸಿದಂತೆ ಬ್ಯಾನರ್ಸ್, ಹೋರ್ಡಿಂಗ್ಸ್, ಬ್ಯಾಡ್ಜ್ ಮುದ್ರಣ ಕಾರ್ಯ ಆಗಬೇಕು. ಜನಪ್ರತಿನಿಧಿಗಳಿಗೆ, ಗಣ್ಯರಿಗೆ, ಮಾಧ್ಯಮ ಪ್ರತಿನಿಧಿಗಳಿಗೆ, ಅಧಿಕಾರಿಗಳು, ಸಿಬ್ಬಂದಿ, ಕಂಪನಿಯ ಕಾರ್ಮಿಕರು, ಸ್ವಯಂ ಸೇವಕರು ಹಾಗೂ ಇನ್ನಿತರರಿಗೆ ಪ್ರತ್ಯೇಕವಾಗಿ ಪಾಸುಗಳನ್ನು ವಿತರಿಸಿ ಕಾರ್ಯಕ್ರಮದಲ್ಲಿ ಅಚ್ಚುಕಟ್ಟುತನ ಕಾಯ್ದುಕೊಳ್ಳಬೇಕು ಎಂದು ತಿಳಿಸಿದರು.

ಕಾರ್ಯಕ್ರಮದ ಬಗ್ಗೆ ವ್ಯಾಪಕ ಪ್ರಚಾರ ಮಾಡಬೇಕು. ಆಹಾರ ಸಿದ್ಧತೆ, ವಿತರಣೆಯಲ್ಲಿ ಯಾವುದೇ ರೀತಿಯ ಲೋಪಗಳು ಆಗದಂತೆ ಆಹಾರ ಪರೀಕ್ಷೆ ಮತ್ತು ಕುಡಿಯುವ ನೀರಿನ ಪರೀಕ್ಷೆಗೆ ಆಹಾರ ಇಲಾಖೆಯ ಅಧಿಕಾರಿಗಳು ಮುತುವರ್ಜಿ ವಹಿಸಬೇಕು. ಕಾರ್ಯಕ್ರಮದ ಸ್ಥಳದಲ್ಲಿ ಅಂಬ್ಯುಲೆನ್ಸ್, ಅಗತ್ಯ ಸಂಖ್ಯೆಯಲ್ಲಿ ವೈದ್ಯಾಧಿಕಾರಿಗಳು ಮತ್ತು ಸಿಬ್ಬಂದಿ ಇರುವಂತೆ ಆರೋಗ್ಯ ಇಲಾಖೆಯ ಅಧಿಕಾರಿಗಳು ನೋಡಬೇಕು ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಸೇರುವುದರಿಂದ ಜನಸಂದಣಿಯ ನಿಯಂತ್ರಣಕ್ಕೆ ಚಿನ್ನದ ಗಣಿ ಕಂಪನಿಯ ಅಧಿಕಾರಿಗಳು ಮತ್ತು ಪೊಲೀಸ್ ಇಲಾಖೆಯು ಈಗಿನಿಂದಲೇ ಮುಂಜಾಗ್ರತಾ ಕ್ರಮಗಳನ್ನು ತೆಗೆದುಕೊಳ್ಳಬೇಕು. ಸಾರ್ವಜನಿಕರು, ಗಣ್ಯರು, ಜನಪ್ರತಿನಿಧಿಗಳು ಸರಳವಾಗಿ ಬಂದು ಹೋಗಲು ಪ್ರತ್ಯೇಕ ಮಾರ್ಗದ ವ್ಯವಸ್ಥೆಗೆ ಅಗತ್ಯ ಸಂಖ್ಯೆಯಲ್ಲಿ ಬ್ಯಾರಿಕೇಡ್ ಅಳವಡಿಸಲು ಸಿದ್ಧತೆ ಮಾಡಬೇಕು ಎಂದು ಅಪರ ಜಿಲ್ಲಾಧಿಕಾರಿಗಳು, ಗಣಿ ಕಂಪನಿಯ ಅಧಿಕಾರಿಗಳು ಮತ್ತು ಜಿಲ್ಲಾ ಪೊಲೀಸ್ ಇಲಾಖೆಯ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಇದೇ ಸಂದರ್ಭದಲ್ಲಿ ಲಿಂಗಸ್ಗೂರು ಸಹಾಯಕ ಆಯುಕ್ತರಾದ ಬಸವಣ್ಣೆಪ್ಪ ಕಲಶೆಟ್ಟಿ, ಡಿವೈಎಸ್ಪಿ ದತ್ತಾತ್ರೇಯ ಕಾರ್ನಾಡ್, ಲಿಂಗಸೂಗೂರು ತಹಶೀಲ್ದಾರ್ ಕೆ.ಸತ್ಯವಂತಿ, ಕಂಪನಿಯ ಕಾರ್ಯನಿರ್ವಾಹಕ ನಿರ್ದೇಶಕರಾದ ಪ್ರಕಾಶ್ ಸೇರಿದಂತೆ ವಿವಿಧ ಇಲಾಖೆಯ ಅಧಿಕಾರಿಗಳು ಹಾಗೂ ಕಂಪನಿಯ ವಿವಿಧ ವಿಭಾಗದ ಅಧಿಕಾರಿಗಳು ಇದ್ದರು.

# ವಿಶ್ವ ಸ್ತನ್ಯಪಾನ ಸಪ್ತಾಹಕ್ಕೆ ಚಾಲನೆ
# ಹೆರಿಗೆ ನಂತರ ಮಗುವಿಗೆ ಆರು ತಿಂಗಳವರೆಗೆ ತಪ್ಪದೆ ಎದೆಹಾಲು ಮಾತ್ರ ನೀಡಿ: ಡಿಎಚ್‌ಓ ಡಾ.ಸುರೇಂದ್ರ ಬಾಬು ಸಲಹೆ

ಜನವಾದಿ ವಾರ್ತೆ



ರಾಯಚೂರು ಆ 1 - ಬಾಲ್ಯದಲ್ಲಿ ಮಗುವಿನ ಆರೋಗ್ಯವನ್ನು ಸದೃಢ ಮಾಡಿದಾಗ ಭವಿಷ್ಯದಲ್ಲಿ ಸಶಕ್ತ ವ್ಯಕ್ತಿಯನ್ನು ರೂಪಿಸಲು ಸಾಧ್ಯ. ಇದಕ್ಕಾಗಿ ಹೆರಿಗೆ ನಂತರದಲ್ಲಿ ಮೊದಲ ಅರ್ಧ ಗಂಟೆಯೊಳಗೆ ತಕ್ಷಣವೇ ಸ್ತನ್ಯಪಾನ ಮಾಡಿಸಲು ಮರೆಯಬಾರದು. ಇದಕ್ಕಾಗಿ ಪಾಲಕರ ಸಹಕಾರ ಅತ್ಯಗತ್ಯವಾಗಿದೆ ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಸುರೇಂದ್ರ ಬಾಬು ಮನವಿ ಮಾಡಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಜಿಲ್ಲಾ ಸಂತಾನೋತ್ಪತ್ತಿ ಮತ್ತು ಮಕ್ಕಳ ಆರೋಗ್ಯ ಕಾರ್ಯಕ್ರಮ, ತಾಲೂಕು ಆರೋಗ್ಯ ಅಧಿಕಾರಿಗಳ ಕಚೇರಿ ರಾಯಚೂರು ರವರ ಸಂಯುಕ್ತಾಶ್ರಯದಲ್ಲಿ ನಗರದ ತಾಯಿ ಮಕ್ಕಳ ಆಸ್ಪತ್ರೆಯಲ್ಲಿ ಆಗಸ್ಟ್ 1ರಂದು ನಡೆದ ವಿಶ್ವ ಸ್ತನ್ಯ ಪಾನ ಸಪ್ತಾಹ ಉದ್ಘಾಟನೆ ನೆರವೇರಿಸಿ ಅವರು ಮಾತನಾಡಿದರು.

ಅನಾದಿ ಕಾಲದಿಂದಲೂ ತಾಯಿಯ ಎದೆ ಹಾಲು ಅಮೃತಕ್ಕೆ ಸಮಾನ ಎನ್ನುವುದು ಜನಸಾಮಾನ್ಯರಲ್ಲಿ ಬೇರುಬಿಟ್ಟಿದ್ದರೂ ಕೆಲವರು ಮಗುವಿನ ಆರೋಗ್ಯಕ್ಕೆ ಹಾನಿ ಮಾಡಬಹುದಾದ ಸಕ್ಕರೆ ನೀರು, ಬೆಲ್ಲದ ನೀರು ಜೇನುತುಪ್ಪ ಕೊಡುತ್ತಾರೆ. ಕುಟುಂಬಕ್ಕೆ ಇಂತಹ ತಪ್ಪು ಮಾಹಿತಿಯನ್ನು ಯಾರಾದರೂ ನೀಡಿದರೆ ದಯವಿಟ್ಟು ಅದನ್ನು ತಿರಸ್ಕರಿಸಬೇಕು. ತಾಯಿ ಮಕ್ಕಳ ಆಸ್ಪತ್ರೆಯಲ್ಲಿ ಮಕ್ಕಳ ತಜ್ಞರು ಕಾರ್ಯ ನಿರ್ವಹಿಸುತ್ತಿದ್ದು ಎಲ್ಲ ಖಾಯಿಲೆಗಳಿಗೆ ಅಗತ್ಯ ಚಿಕಿತ್ಸೆ ಔಷಧೋಪಚಾರ ನೀಡಲಾಗುತ್ತಿದ್ದು ಇದರ ಸದುಪಯೋಗ ಪಡೆಯಲು ವಿನಂತಿಸಿದರು.

ಎಮ್.ಎನ್, ಜಿಲ್ಲಾ ಸಂತಾನೋತ್ಪತ್ತಿ ಮತ್ತು ಆರೋಗ್ಯ ಅಧಿಕಾರಿಗಳಾದ ಡಾ.ನಂದಿತಾ ಅವರು ಪ್ರಾಸ್ತಾವಿಕ ಮಾತನಾಡಿ, ತಾಯಿ ಎದೆ ಹಾಲು ನೀಡುವುದರಲ್ಲಿ ಹೂಡಿಕೆ ಮಾಡಿದರೆ ಮಕ್ಕಳ ಆರೋಗ್ಯಕರ ಭವಿಷ್ಯಕ್ಕಾಗಿ ಹೂಡಿಕೆ ಮಾಡಿದಂತೆ ಎಂಬುದು ಈ ವರ್ಷದ ಘೋಷಣೆಯಾಗಿದ್ದು, ಇದು ಮಗುವಿನ ರೋಗನಿರೋಧಕ ಶಕ್ತಿಯನ್ನು ಹೆಚ್ಚಿಸಲು ಸಹಕಾರಿಯಾಗುತ್ತದೆ. ಮಗುವಿನ ಆರೋಗ್ಯಕ್ಕಾಗಿ ಹಣ ವೆಚ್ಚ ಮಾಡುವುದನ್ನು ತಪ್ಪಿಸಲು ಹೆರಿಗೆ ನಂತರದಲ್ಲಿ ಮೊದಲ ಅರ್ಧ ಗಂಟೆಯೊಳಗೆ ತಕ್ಷಣವೇ ಸ್ತನ್ಯಪಾನ ಮಾಡಿಸಬೇಕು ಎಂಬುದನ್ನು ಅರಿಯಬೇಕು ಎಂದರು.

ಹೆರಿಗೆ ನಂತರದಲ್ಲಿ ತಕ್ಷಣ ಬರುವ ಹಳದಿ (ಕೊಲೆಸ್ಟಮ್) ಹಾಲು ಶಿಶುವಿಗೆ ಶಕ್ತಿವರ್ಧಕವಾಗಿದೆ. ಸ್ತನ್ಯಪಾನ ತಾಯಿಯ ಮಮತೆಯ ಪ್ರತೀಕವಾಗಿದೆ. ಪ್ರತಿಯೊಬ್ಬ ತಾಯಿಯಲ್ಲಿ ತನ್ನ ಮಗುವಿಗೆ ಸಾಕಾಗುವಷ್ಟು ಹಾಲನ್ನು ಉತ್ಪಾದಿಸುವ ಸಾಮರ್ಥ್ಯವಿದೆ. ಮಗು ಹಾಲುಂಡಷ್ಟು ಎದೆಹಾಲು ಹೆಚ್ಚು ಉತ್ಪತ್ತಿಯಾಗುವುದು. ಮಗುವಿಗೆ ಹಾಲು ಸಾಕಾಗಲ್ಲ ಎಂಬ ಮನೋಭಾವನೆಯನ್ನು ತೊಡೆದು ಹಾಕಿ ಮಗುವಿನ ಸಮರ್ಪಕವಾದ ಪೋಷಣೆಗೆ ತಾಯಿ ತನ್ನ ಸಾಮರ್ಥ್ಯ ಅರಿತು ಎದೆಹಾಲನ್ನು ಉಣಿಸಲು ಮುಂದಾಗಬೇಕು. ಎದೆಹಾಲು ಬರುತ್ತಿಲ್ಲವೆಂದು ಬಾಟಲಿ ಹಾಲು ಗ್ರೈಪ್ ವಾಟರ್ ಇನ್ನಿತರ ಬೇರೆ ಏನೂ ಕುಡಿಸಬಾರದು. ಮಗುವಿಗೆ ಎದೆಹಾಲಿನ ಜೊತೆಗೆ ಲಸಿಕೆಯನ್ನು ಹಾಕಿಸಬೇಕು ಎಂದು ತಾಯಿಂದಿರರಿಗೆ ತಿಳಿಸಿದರು. ಈ ದಿಶೆಯಲ್ಲಿ ಜಿಲ್ಲೆಯಾದ್ಯಂತ ನಿರಂತರವಾಗಿ ಎಲ್ಲ ತಾಲೂಕುಗಳಲ್ಲಿ ನೀಡುವ ಜಾಗೃತಿ ಶಿಬಿರಗಳ ಮೂಲಕ ಮಾಹಿತಿ ಪಡೆದುಕೊಳ್ಳುವಂತೆ ವಿನಂತಿಸಿದರು.

ಈ ಸಂದರ್ಭದಲ್ಲಿ ಜಿಲ್ಲಾ ಕ್ಷಯರೋಗ ನಿರ್ಮೂಲನಾಧಿಕಾರಿ ಡಾ.ಮಹಮ್ಮದ್ ಶಾಕೀರ್, ತಾಲೂಕು ಆರೋಗ್ಯಾಧಿಕಾರಿ ಡಾ.ಪ್ರಜ್ವಲ ಕುಮಾರ್, ರೆಡಿಯಾಲಾಜಿಸ್ಟ್ ಡಾ.ಇರ್ಮಾನ ಪರವೇಜ್, ಕ್ಷೇತ್ರ ಆರೋಗ್ಯ ಶಿಕ್ಷಣಾಧಿಕಾರಿ ಸರೋಜಾ ಕೆ., ತಜ್ಞವೈದ್ಯರಾದ ಡಾ.ಭುವನೇಶ್ವರಿ, ಡಾ.ಬಸ್ಸಮ್ಮ, ಮಕ್ಕಳ ತಜ್ಞರು, ಶುಶ್ರೂಷಣಾಧಿಕಾರಿಗಳು ಮತ್ತು ಸಿಬ್ಬಂದಿ ಹಾಗೂ ತಾಯಂದಿರು ಉಪಸ್ಥಿತರಿದ್ದರು.

# ಲಭ್ಯವಾಗಿರುವ ಅಸ್ಥಿಪಂಜರಗಳ ರಹಸ್ಯ ಬೇಧಿಸಲು ಮುಂದಾದ ಎಸ್‌ಐಟಿ



ಬೆಂಗಳೂರು ಆ 1- ದಕ್ಷಿಣ ಕನ್ನಡ ಜಿಲ್ಲೆಯ ಧರ್ಮಸ್ಥಳದ ನೇತ್ರಾವತಿ ಸ್ನಾನ ಘಟ್ಟದ ಬಳಿಯ ಕಾಡುಪ್ರದೇಶದಲ್ಲಿ ಅನಾಮಿಕ ಗುರುತಿಸಿದ ಪಾಯಿಂಟ್ ನಂಬರ್ 6ರಲ್ಲಿ ಅಸ್ಥಿಪಂಜರದ ಅವಶೇಷಗಳು ಪತ್ತೆಯಾಗಿವೆ. ಹೀಗಾಗಿ ವಿಶೇಷ ತನಿಖಾ ತಂಡ (ಎಸ್‌ಐಟಿ) ಅಸ್ಥಿಪಂಜರದ ರಹಸ್ಯ ಕೆದಕಲು ಮುಂದಾಗಿದೆ.

ವೈದ್ಯಕೀಯ-ಕಾನೂನು ಪ್ರಕರಣಗಳಲ್ಲಿ ಅಸ್ಥಿಪಂಜರಗಳು ವಯಸ್ಸು, ಲಿಂಗ, ಮತ್ತು ಸಾವಿನ ಕಾರಣದ ಬಗ್ಗೆ ಫೋರೆನ್ಸಿಕ್ ಮಾನವಶಾಸ್ತ್ರಜ್ಞ-ರಿಗೆ ಗಮನಾರ್ಹ ಸುಳಿವುಗಳನ್ನು ನೀಡಬಹುದು. ಆದರೆ ಅವು ಉತ್ತಮವಾಗಿ ಸಂರಕ್ಷಿಸಲ್ಪಟ್ಟಿದ್ದರೆ ಮಾತ್ರ ಸಾಧ್ಯವಾಗುತ್ತದೆ ಎಂದು ಫೋರೆನ್ಸಿಕ್ ಮಾನವಶಾಸ್ತ್ರ ವಿಜ್ಞಾನದ ಕೆಲವು ಫೋರೆನ್ಸಿಕ್ ವೈದ್ಯಕೀಯ ತಜ್ಞರು ಅಭಿಪ್ರಾಯಪಟ್ಟಿದ್ದಾರೆ.

ಪ್ರಕರಣದ ತನಿಖೆ ನಡೆಸುತ್ತಿರುವ ವಿಶೇಷ ತನಿಖಾ ತಂಡ ಕ್ಕೆ ದೂರುದಾರ ಗುರುತಿಸಿದ ಆರನೇ ಸಮಾಧಿ ಸ್ಥಳದಲ್ಲಿ ಕೆಲವು ಅಸ್ಥಿಪಂಜರದ ಅವಶೇಷಗಳು ಕಂಡುಬಂದಿವೆ. ಅದನ್ನು ಫೋರೆನ್ಸಿಕ್ ಪರೀಕ್ಷೆಗೆ ಕಳುಹಿಸಲಾಗಿದೆ. ಮೂಳೆಗಳನ್ನು ಪರೀಕ್ಷಿಸಲು ಈ ಪ್ರಕ್ರಿಯೆಯು ಕೆಲವು ವಾರಗಳ ಸಮಯ ತೆಗೆದುಕೊಳ್ಳುತ್ತದೆ. ಇದಲ್ಲದೆ, ಇದನ್ನು ಡಿಎನ್‌ಎ ಪ್ರೊಫೈಲಿಂಗ್‌ಗಾಗಿ ಫೋರೆನ್ಸಿಕ್ ವಿಜ್ಞಾನ ಪ್ರಯೋಗಾಲಯಕ್ಕೆ ಕಳುಹಿಸಲಾಗುತ್ತದೆ. ಅಸ್ಥಿಪಂಜರದ ವಯಸ್ಸು ಮತ್ತು ಸ್ಥಿತಿ ಸೇರಿದಂತೆ ಹಲವಾರು ಅಂಶಗಳನ್ನು ಅವಲಂಬಿಸಿ ಇದು ಸ್ವಲ್ಪ ಸಮಯ ತೆಗೆದುಕೊಳ್ಳಬಹುದು ಎಂದು ಕೆಲವು ತಜ್ಞರು ಹೇಳಿದ್ದಾರೆ.

ಅಸ್ಥಿಪಂಜರ ಒಟ್ಟಾಗಿ ಸಿಕ್ಕರೆ, ಅದರಿಂದ ಲಿಂಗ, ಅಂದಾಜು ವಯಸ್ಸು, ಎತ್ತರ ಮತ್ತು ಅನೇಕ ಸಂದರ್ಭಗಳಲ್ಲಿ ಸಾವಿಗೆ ಕಾರಣದ ಬಗ್ಗೆ ಅಮೂಲ್ಯವಾದ ವೈಜ್ಞಾನಿಕ ಪುರಾವೆಗಳನ್ನು ಒದಗಿಸುತ್ತವೆ. ಅಸ್ಥಿಪಂಜರವನ್ನು ಕಾಣೆಯಾದ ವ್ಯಕ್ತಿಯೊಂದಿಗೆ ಜೋಡಿಸಲು, ಕಾಣೆಯಾದ ವ್ಯಕ್ತಿಯ ಛಾಯಾಚಿತ್ರದ ಮೇಲೆ ತಲೆಬುರುಡೆಯನ್ನು ಮರು-ಅಳವಡಿಸಲು ಬಯೋಲಾಜಿಕಲ್ ಸಂಬಂಧಿಯಿಂದ ಡಿಎನ್‌ಎ ಮಾದರಿ ಇರಬೇಕು. ಮಾನವ ತಲೆಬುರುಡೆ, ಉದ್ದನೆಯ ಮೂಳೆಗಳಿಂದ ಲಿಂಗ, ವಯಸ್ಸು ಮತ್ತು ಸಾವಿನ ಸಂಭವನೀಯ ಕಾರಣವನ್ನು ಅಳೆಯಬಹುದು. ಅಸ್ಥಿಪಂಜರದ ಅವಶೇಷಗಳು 22 ವರ್ಷಕ್ಕಿಂತ ಕಡಿಮೆ ವಯಸ್ಸಿನವರಾಗಿದ್ದರೆ, ಮೌಲ್ಯ ಮಾಪನ ನಿಖರವಾಗಿರಬಹುದು ಎಂದಿದ್ದಾರೆ.

ವಯಸ್ಸಾದ ವ್ಯಕ್ತಿಗಳಲ್ಲಿ ಅಂ-ದಾಜಿನ ಮೇಲೆ ನಿರ್ಧರಿಸ ಲಾಗುತ್ತದೆ. ಮೂಳೆಗಳಿಂದ ದೇಹದ ಮೇಲೆ ತೀವ್ರವಾದ ಗಾಯಗಳಾಗಿವೆಯೇ ಎಂದು ಹೇಳಬಹುದು, ಏಕೆಂದರೆ ಮುರಿತದ ಚಿಹ್ನೆಗಳು ಇರುತ್ತವೆ. ವೈದ್ಯಕೀಯ-ಕಾನೂನು ಪ್ರಕರಣದಲ್ಲಿ ತಲೆಬುರುಡೆಯ ಮುರಿತವು ವಿಧಿವಿಜ್ಞಾನದ ಪ್ರಮುಖ ಸಾಕ್ಷ್ಯವಾಗಿದೆ. ವಿಷಪೂ-ರಿತತೆಯಿಂದ ಸಾವನ್ನು ಮೂಳೆಗಳಲ್ಲಿ ಕಂಡುಬರುವ ವಿಷದ ನಿಕ್ಷೇಪಗಳಿಂದಲೂ ಖಚಿತಪಡಿಸಿಕೊಳ್ಳಬಹುದು ಎಂಬ ಅಭಿಪ್ರಾಯವೂ ವ್ಯಕ್ತವಾಗಿದೆ.

ದವಡೆ ಹಲ್ಲುಗಳು ಮತ್ತು ಉದ್ದನೆಯ ಮೂಳೆಯಿಂದ ಹೊರತೆಗೆಯಲಾದ ಡಿಎನ್‌ಎಇಂದ ವಿಶೇಷವಾಗಿ ತೊಡೆಯ ಮೂಳೆ (ಎಲುಬು) ವ್ಯಕ್ತಿಯ ಗುರುತನ್ನು ಖಚಿತಪಡಿಸಿಕೊಳ್ಳಲು ನಿರ್ಣಾಯಕವಾಗಿದೆ. ನಂತರ ಮಾದ-ರಿಯನ್ನು ಸತ್ತವರ ರಕ್ತ ಸಂಬಂಧಿಯ ಡಿಎನ್‌ಎ ಜೊತೆ ಹೋಲಿಸಲಾಗುತ್ತದೆ ಎಂದು ತಜ್ಞರು ಹೇಳಿದರು.

ಒಂದು ವೇಳೆ ಉಸಿರುಗಟ್ಟಿಸುವಿಕೆಯಿಂದ ಸಾವು ಸಂಭವಿಸಿದ್ದರೆ ಮೂಳೆಗಳು ಯಾವುದೇ ಮಾಹಿತಿಯನ್ನು ನೀಡುವುದಿಲ್ಲ. ತಾಜಾ ಅಸ್ಥಿಪಂಜರಗಳಿಂದ ಹೆಚ್ಚಿನ ಮಾಹಿತಿ ಸಿಗುತ್ತದೆ. ಅಸ್ಥಿಪಂಜರಗಳು ಕೊಳೆತು ಹೋಗಿದ್ದರೇ ಅವುಗಳಿಂದ ಮೃದು ಅಂಗಾಂಶಗಳನ್ನು ಪಡೆಯುವುದು ಕಷ್ಟ. ದೇಹವನ್ನು ಹೂಳಲಾದ ಮಣ್ಣಿನ ಸ್ವರೂಪವನ್ನು ಅವಲಂಬಿಸಿ ಅಸ್ಥಿಪಂಜರ ಕೊಳೆಯಲು ಒಂದರಿಂದ ಮೂರು ತಿಂಗಳವರೆಗೆ ಸಮಯ ತೆಗೆದುಕೊಳ್ಳುತ್ತದೆ.

# ರಾಜ್ಯದಲ್ಲಿ ರಸಗೊಬ್ಬರ ಕೊರತೆ ನೀಗಿಸಲು ಅಗತ್ಯ ಕ್ರಮ

ಜನವಾದಿ ವಾರ್ತೆ

ರಾಯಚೂರು ಆ 01 - ಕೇಂದ್ರ ಸರ್ಕಾರದಿಂದ ಕಳೆದ ಮೂರು ವರ್ಷಗಳಲ್ಲಿ ಆರಂಭಿಕ ಶುಲ್ಕನ್ನು ಪರಿಗಣಿಸದೇ ಯೂರಿಯಾ ಸೇರಿದಂತೆ ಎಲ್ಲಾ ರಸಗೊಬ್ಬರಗಳನ್ನು ಬೇಡಿಕೆಗೆ ಅನುಗುಣವಾಗಿ ಹಂಚಿಕೆ ಮತ್ತು ಸರಬರಾಜು ಮಾಡಲಾಗಿರುತ್ತದೆ. ಇದರಿಂದಾಗಿ ರಾಜ್ಯದಲ್ಲಿ ಯಾವುದೇ ರೀತಿಯ ರಸಗೊಬ್ಬರದ ಕೊರತೆ ಕಂಡು ಬಂದಿರುವುದಿಲ್ಲ ಎಂದು ಕೃಷಿ ಇಲಾಖೆ ಪ್ರಕಟಣೆ ತಿಳಿಸಿದೆ.

ರಸಗೊಬ್ಬರ ಕೊರತೆಗೆ ಮೂಲ ಕಾರಣ: ಪ್ರಸಕ್ತ ಸಾಲಿನಲ್ಲಿ ಮಾತ್ರ ಆರಂಭಿಕ ಶುಲ್ಕ ಪರಿಗಣಿಸಿ, ಕೇಂದ್ರ ಸರ್ಕಾರದಿಂದ ರಸಗೊಬ್ಬರ ಹಂಚಿಕೆ ಮತ್ತು ಸರಬರಾಜು ಪ್ರಕ್ರಿಯೆ ಜರುಗಿಸಲಾಗುತ್ತಿದೆ. ಇದರಿಂದಾಗಿ ರಾಜ್ಯದಲ್ಲಿ ಯೂರಿಯಾ ರಸಗೊಬ್ಬರದ ಪ್ರಾರಂಭಿಕ ದಾಸ್ತಾನನ್ನು ಪರಿಗಣಿಸಿ, ಯೂ-ರಿಯಾ ರಸಗೊಬ್ಬರದ ಕಡಿಮೆ ಹಂಚಿಕೆ ಮಾಡಿರುವುದು ಕೊರತೆಗೆ ಮೂಲ ಕಾರಣವಾಗಿದೆ.

ರಾಜ್ಯದ ಬೆಳೆ ಪದ್ಧತಿಯನ್ನು ಆಧರಿಸಿ ಮುಂಗಾರು ಹಂಗಾಮಿಗೆ ಮುಂಚಿತವಾಗಿ ಕೇಂದ್ರ ಸರ್ಕಾರಕ್ಕೆ 12.95 ಲಕ್ಷ ಮೆ.ಟನ್ ಯೂರಿಯಾ ರಸಗೊಬ್ಬರ ಬೇಡಿಕೆಯನ್ನು ಸಲ್ಲಿಸಲಾಗಿತ್ತು. ಆದರೆ, ಕೇಂದ್ರ ಸರ್ಕಾರದಿಂದ 11.17 ಲಕ್ಷ ಮೆ.ಟನ್ ಹಂಚಿಕೆ ನಿಗದಿಪಡಿಸಲಾಗಿರುತ್ತದೆ.

ಏಪ್ರಿಲ್ ಮಾಹೆಯಿಂದ ಜುಲೈ ಮಾಹೆಯವರೆಗೆ 3.02ಲಕ್ಷ ಮೆ.ಟನ್ ಡಿ.ಎ.ಪಿ ರಸಗೊಬ್ಬರದ ಬೇಡಿಕೆ ಇದ್ದು ಕೇಂದ್ರ ಸರ್ಕಾರದಿಂದ ಇಲ್ಲಿಯವರೆಗೆ 2.21 ಲಕ್ಷ ಮೆ.ಟನ್ ಸರಬರಾಜಾಗಿದ್ದು, ಇನ್ನೂ 81,000 ಮೆ.ಟನ್ ಸರಬರಾಜು ಬಾಕಿ ಇರುತ್ತದೆ.

ರಾಜ್ಯದಲ್ಲಿ ಡಿ.ಎ.ಪಿ. ಕೊರತೆ ಕಂಡು ಬಂದಾಗ ಕೃಷಿ ಸಚಿವರ ನಿರ್ದೇಶನದಂತೆ ಪರ್ಯಾಯ ರಸಗೊಬ್ಬರಗಳ ಬಳಕೆ ಕುರಿತು ರೈತರಲ್ಲಿ ಅರಿವು ಮೂಡಿಸಿ, ಪ್ರಸ್ತುತ, ಡಿ.ಎ.ಪಿ. ರಸಗೊಬ್ಬರದ ಕೊರತೆಯನ್ನು ನೀಗಿಸಲಾಗಿದೆ.

ಏಪ್ರಿಲ್ ಮಾಹೆಯಿಂದ ಜುಲೈ ಮಾಹೆಯವರೆಗೆ 6.80ಲಕ್ಷ ಮೆ.ಟನ್ ಯೂರಿಯಾ ರಸಗೊಬ್ಬರದ ಬೇಡಿಕೆ ಇದ್ದು ಕೇಂದ್ರ ಸರ್ಕಾರದಿಂದ ಇಲ್ಲಿಯವರೆಗೆ 5.35 ಲಕ್ಷ ಮೆ.ಟನ್ ಸರಬರಾಜಾಗಿದ್ದು, ಇನ್ನೂ 1.45 ಲಕ್ಷ ಮೆ.ಟನ್ ಸರಬರಾಜು ಬಾಕಿ ಇರುತ್ತದೆ.

ಕೇಂದ್ರ ಸರ್ಕಾರದಿಂದ ಇಲ್ಲಿಯವರೆಗೆ ಸರಬರಾಜು ಮಾಡಿರುವ ರಸಗೊಬ್ಬರವನ್ನು ಸಮರ್ಪಕವಾಗಿ ಎಲ್ಲಾ ಜಿಲ್ಲೆಗಳಿಗೆ ಹಂಚಿಕೆ ಮಾಡಿ ರೈತರಿಗೆ ಯಾವುದೇ ರೀತಿಯ ತೊಂದರೆ ಆಗದಂತೆ ನಿಭಾಯಿಸಲಾಗಿರುತ್ತದೆ.

ರಾಜ್ಯದಿಂದ ರಸಗೊಬ್ಬರ ಪೂರೈಕೆಗೆ ಆರು ಬಾರಿ ಮನವಿ: ಕೇಂದ್ರ ರಸಗೊಬ್ಬರ ಇಲಾಖೆಯ ಅಧಿಕಾರಿಗಳಿಗೆ ಕೃಷಿ ಇಲಾಖೆ ವತಿಯಿಂದ ಏಪ್ರಿಲ್ ಮಾಹೆಯಿಂದ ಇಲ್ಲಿಯವರೆಗೆ ಆರು ಬಾರಿ ಪತ್ರಗಳನ್ನು ಬರೆದು ಹಂಚಿಕೆಗೆ ಅನುಗುಣವಾಗಿ ಅವಶ್ಯವಿರುವ ಡಿ.ಎ.ಪಿ ಮತ್ತು ಯೂರಿಯಾ ರಸಗೊಬ್ಬರಗಳ ಪೂರೈಕೆ ಮಾಡಲು ಮನವಿ ಮಾಡಲಾಗಿರುತ್ತದೆ.

ರಾಜ್ಯದ ಕೃಷಿ ಸಚಿವರು ಕೇಂದ್ರ ಸರ್ಕಾರದ ರಸಗೊಬ್ಬರ ಖಾತೆ ಸಚಿವರಿಗೆ ಅಗತ್ಯವಿರುವ ಡಿ.ಎ.ಪಿ. ರಸಗೊಬ್ಬರದ ಪೂರೈಕೆಗೆ ಪತ್ರ ಮುಖೇನ ಮನವಿ ಸಲ್ಲಿಸಿದ್ದಾರೆ. ಅಲ್ಲದೇ, ಕೃಷಿ ಸಚಿವರೇ ಖುದ್ದಾಗಿ, ಕೇಂದ್ರ ಸರ್ಕಾರದ ಕೃಷಿ ಮತ್ತು ರೈತರ ಕಲ್ಯಾಣ ಸಚಿವರನ್ನು ಇದೇ ಜುಲೈ 7 ರಂದು ಭೇಟಿ ಮಾಡಿ ಕೇಂದ್ರ ಸರ್ಕಾರದಿಂದ ಸಕಾಲದಲ್ಲಿ ಅಗತ್ಯವಿರುವ ರಸಗೊಬ್ಬರಗಳ ಪೂರೈಕೆ ಮಾಡಲು ಮನವಿ ಮಾಡಿರುತ್ತಾರೆ.

ರಾಜ್ಯದಲ್ಲಿ ಡಿ.ಎ.ಪಿ ಮತ್ತು ಯೂರಿಯಾ ರಸಗೊಬ್ಬರದ ಕಡಿಮೆ ಪೂರೈಕೆಯನ್ನು ಮನಗಂಡು, ಮುಖ್ಯಮಂತ್ರಿಗಳು ಕೇಂದ್ರ ಸರ್ಕಾರದ ರಸಗೊಬ್ಬರ ಖಾತೆ ಸಚಿವರಿಗೆ, ರಾಜ್ಯಕ್ಕೆ ಅಗತ್ಯವಿರುವ ರಸಗೊಬ್ಬರ ಪೂರೈಕೆಗೆ ಜುಲೈ 17 ಮತ್ತು 25ರಂದು ಪತ್ರ ಮುಖೇನ ಮನವಿ ಸಲ್ಲಿಸಿರುತ್ತಾರೆ. ಪ್ರಸ್ತುತ ಕೇಂದ್ರ ಸರ್ಕಾರದಿಂದ ಹಂಚಿಕೆಗನುಗುಣವಾಗಿ ಯೂರಿಯಾ ರಸಗೊಬ್ಬರವನ್ನು ಸರಬರಾಜು ಮಾಡದಿರುವುದರಿಂದ ರಾಜ್ಯದಲ್ಲಿ ಅಲ್ಲಲ್ಲಿ ಯೂರಿಯಾ ರಸಗೊಬ್ಬರದ ಕೊರತೆ ಕಂಡು ಬಂದಿರುತ್ತದೆ. ಈ ಸಂಬಂಧವಾಗಿ ರೈತರು ವಿವಿಧ ಜಿಲ್ಲೆಗಳಲ್ಲಿ ಯೂರಿಯಾ ರಸಗೊಬ್ಬರದ ಪೂರೈಕೆ ಬಗ್ಗೆ ಅಹವಾಲುಗಳನ್ನು ಸಲ್ಲಿಸಿರುತ್ತಾರೆ.

ಯೂರಿಯಾ ಬೇಡಿಕೆ ಪ್ರಮುಖ ಕಾರಣಗಳು: ರಾಜ್ಯದಲ್ಲಿ ಮುಂಗಾರು ಹಂಗಾಮಿನಲ್ಲಿ ಮುಂಚಿತವಾಗಿ ಉತ್ತಮ ಮಳೆಯಾಗಿದ್ದು, ಸಾಮಾನ್ಯ ಅವಧಿಗಿಂತ ಮುಂಚೆ ಬಿತ್ತನೆ ಪ್ರಾರಂಭವಾಗಿದೆ. ಇಲ್ಲಿಯವರೆಗೆ ಬಿತ್ತನೆ ವಿಸ್ತೀರ್ಣ ಹಿಂದಿನ ಸಾಲಿಗೆ ಹೋಲಿಸಿದಲ್ಲಿ ಹೆಚ್ಚಾಗಿರುತ್ತದೆ. ಹೆಚ್ಚು ರಸಗೊಬ್ಬರ ಅವಶ್ಯವಿರುವ ಮುಸುಕಿನ ಜೋಳದ ವಿಸ್ತೀರ್ಣವು ಅಂದಾಜು 2.00ಲಕ್ಷ ಹೆಕ್ಟೇರ್ ಗಣನೀಯವಾಗಿ ಹೆಚ್ಚಳವಾಗಿದೆ. ಧಾರವಾಡ ಮತ್ತು ಗದಗ ಜಿಲ್ಲೆಗಳಲ್ಲಿ ಅಂದಾಜು 13,000 ಹೆಕ್ಟೇರ್ ಪ್ರದೇಶದಲ್ಲಿ ಮರುಬಿತ್ತನೆ ಕೈಗೊಳ್ಳಲಾಗಿರುತ್ತದೆ. ತುಂಗಭದ್ರಾ, ಕೃಷ್ಣಾ, ಕಾವೇರಿ ಇತ್ಯಾದಿ ಪ್ರಮುಖ ಜಲಾಶಯಗಳಿಂದ ಅವಧಿಗಿಂತ ಮುಂಚಿತವಾಗಿ ಅಚ್ಚುಕಟ್ಟು ಪ್ರದೇಶಗಳಿಗೆ ನೀರನ್ನು ಬಿಟ್ಟಿರುವುದರಿಂದ ಮುಂಚಿತವಾಗಿ ನಾಟಿ ಕೈಗೊಳ್ಳಲಾಗಿರುವುದು ಯೂರಿಯಾ ಮತ್ತು ರಸಗೊಬ್ಬರ ಬೇಡಿಕೆ ಪ್ರಮುಖ ಕಾರಣವಾಗಿದೆ.

ಇಲಾಖೆಯ ಅಧಿಕಾರಿಗಳು ಪ್ರತಿ ಮಂಗಳವಾರ ಕೇಂದ್ರ ಸರ್ಕಾರದಿಂದ ಜರುಗಿಸುವ ವಿಡಿಯೋ ಸಂವಾದದಲ್ಲಿ ರಾಜ್ಯಕ್ಕೆ ಅಗತ್ಯವಿರುವ ರಸಗೊಬ್ಬರಗಳ ಪೂರೈಕೆ ಮಾಡುವಂತೆ ಮನವಿ ಸಲ್ಲಿಸಿರುತ್ತಾರೆ. ಅಲ್ಲದೇ, ಕೇಂದ್ರ ಸರ್ಕಾರದ ರಸಗೊಬ್ಬರ ಇಲಾಖೆಯ ಅಧಿಕಾರಿಗಳೊಂದಿಗೆ ನಿರಂತರ ಸಂಪರ್ಕದಲ್ಲಿದ್ದು ರಾಜ್ಯದಲ್ಲಿ ಅವಶ್ಯವಿರುವ ರಸಗೊಬ್ಬರ ಪೂರೈಕೆಗೆ ಅವಶ್ಯ ಕ್ರಮ ವಹಿಸುತ್ತಿದ್ದಾರೆ.

ಯೂರಿಯಾ ರಸಗೊಬ್ಬರಕ್ಕೆ ಪರ್ಯಾಯವಾಗಿ ಪರಿಸರ ಸ್ನೇಹಿಯಾಗಿರುವ ನ್ಯಾನೋ ರಸಗೊಬ್ಬರ ಬಳಕೆಗೆ ಇಲಾಖೆಯಿಂದ ವ್ಯಾಪಕ ಪ್ರಚಾರ ನೀಡಿ ಅರಿವು ಮೂಡಿಸಲಾಗುತ್ತಿದೆ. ಬೆಳೆ, ಮಣ್ಣು, ಮಾನವ, ಜಾನುವಾರು ಮತ್ತು ಪರಿಸರದ ಆರೋಗ್ಯದ ದೃಷ್ಟಿಯಿಂದ ಯೂರಿಯಾ ಬಳಕೆಯನ್ನು ಕಡಿತಗೊಳಿಸಲು ರೈತರಲ್ಲಿ ಮನವಿ ಮಾಡಲಾಗಿದೆ.

ಆರಂಭಿಕ ಶುಲ್ಕ ಪರಿಗಣಿಸದೆ ಕೊರತೆಯಾಗಿರುವ 81,000 ಮೆ.ಟನ್ ಡಿ.ಎ.ಪಿ. ಮತ್ತು 1,45,000 ಮೆ.ಟನ್. ಯೂ-ರಿಯಾ ರಸಗೊಬ್ಬರವನ್ನು ಕೇಂದ್ರ ಸರ್ಕಾರವು ಪೂರೈಸಿದಲ್ಲಿ ರೈತರ ಬವಣೆ ನೀಗಿಸಬಹುದಾಗಿದೆ. ಈ ನಿಟ್ಟಿನಲ್ಲಿ ಕೇಂದ್ರ ಸರ್ಕಾರವು ಸಹ ಅಗತ್ಯ ಕ್ರಮ ಜರುಗಿಸಬೇಕಾಗಿದೆ ಎಂದು ಪ್ರಕಟಣೆ ತಿಳಿಸಿದೆ.

# ಕೆಕೆಆರ್‌ಡಿಬಿ ಕೋಶದಲ್ಲಿ ಕಾರ್ಯನಿರ್ವಹಿಸಲು ನಿವೃತ್ತ ಸರಕಾರಿ ಅಧಿಕಾರಿಗಳಿಂದ ಅರ್ಜಿ ಆಹ್ವಾನ

ರಾಯಚೂರು ಆ 01- ಇಲ್ಲಿನ ಜಿಲ್ಲಾಧಿಕಾರಿಗಳ ಕಚೇರಿಯುಲ್ಲಿ ಸ್ಥಾಪಿಸಿರುವ ಕಲ್ಯಾಣ ಕರ್ನಾಟಕ ಪ್ರಾದೇಶಿಕ ಅಭಿವೃದ್ಧಿ ಮಂಡಳಿಯ ಕೋಶದಲ್ಲಿ ಕಾರ್ಯನಿರ್ವಹಿಸಲು ಗುತ್ತಿಗೆ ಆಧಾರದಡಿ ನಿವೃತ್ತ ಸರಕಾರಿ ಅಧಿಕಾರಿಗಳನ್ನು ನೇಮಿಸಿಕೊಳ್ಳಲು ಅರ್ಹರಿಂದ ಅರ್ಜಿ ಆಹ್ವಾನಿಸಲಾಗಿದೆ.

ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಯೋಜನೆಗಳ ಕಾರ್ಯಾನುಷ್ಠಾನಕ್ಕೆ ಸಹಕಾ-ರಿಯಾಗಲು ಆಡಳಿತ ಹಿತದೃಷ್ಟಿಯಿಂದ ಜಿಲ್ಲೆಗೆ ಒಂದರಂತೆ ಜಿಲ್ಲಾಧಿಕಾರಿಗಳ ಕಚೇರಿ ಅಥವಾ ಮುಖ್ಯ ಕಾರ್ಯನಿರ್ವಹಾಕ ಅಧಿಕಾರಿಗಳು ಜಿಲ್ಲಾ ಪಂಚಾಯತ ಕಚೇರಿ ಒಳಗೊಂಡಂತೆ ಜಿಲ್ಲೆಯಲ್ಲಿ ಒಂದು ಕೋಶವನ್ನು ಸ್ಥಾಪಿಸಿ ನಿವೃತ್ತ ಸರಕಾರಿ ಅಧಿಕಾರಿಗಳ ಸೇವೆಯನ್ನು ಪಡೆದುಕೊಳ್ಳಲು ಮಂಡಳಿಯಿಂದ ಅನುಮತಿ ನೀಡಿಲಾಗಿದ್ದು, ತಾಂತ್ರಿಕ ಸಲಹೆಗಾರರ 1 ಹುದ್ದೆಗೆ ನಿವೃತ್ತ ಅಧೀಕ್ಷಕ ಅಭಿಯಂತರರು ಅಥವಾ ನಿವೃತ್ತ ಕಾರ್ಯನಿರ್ವಾಹಕ ಅಭಿಯಂತರರು ಅರ್ಜಿ ಸಲ್ಲಿಸಬಹುದಾಗಿದೆ. ಮಾಸಿಕ 40 ಸಾವಿರ ರೂ.ಗಳನ್ನು ಗೌರವಧನವನ್ನು ನೀಡಲಾಗುವುದು. ತಾಂತ್ರಿಕ ಅಧಿಕಾರಿ 1 ಹುದ್ದೆಗೆ ನಿವೃತ್ತ ಕಾರ್ಯನಿರ್ವಾಹಕ ಅಭಿಯಂತರರು ಅಥವಾ ನಿವೃತ್ತ ಸಹಾಯುಕ ಕಾರ್ಯನಿರ್ವಾಹಕ ಅಭಿಯಂತರರು ಅರ್ಜಿ ಸಲ್ಲಿಸಬಹುದಾಗಿದೆ. ಮಾಸಿಕ 30 ಸಾವಿರ ರೂ.ಗಳನ್ನು ಗೌರವಧನ ನೀಡಲಾಗುವುದು.

ಅರ್ಹತೆ ಹಾಗೂ ಷರತ್ತುಗಳು: ನಿವೃತ್ತ ಅಧಿಕಾರಿಯ ವಯಸ್ಸು 65 ವರ್ಷ ಮೀರಿರಬಾರದು. ನಿವೃತ್ತ ಅಧಿಕಾರಿಗಳು ಸಿವಿಲ್ ಎಂಜಿನೀಯರ ಆಗಿರತಕ್ಕದ್ದು. ನಿವೃತ್ತ ಅಧಿಕಾರಿಗಳನ್ನು ಆಯ್ಕೆ ಸಮಿತಿಯಿಂದ ಸಂದರ್ಶನದ ಮೂಲಕ ಆಯ್ಕೆ ಮಾಡಲಾಗುವುದು. ನಿವೃತ್ತ ಅಧಿಕಾರಿಯವರು ತಮ್ಮ ಪಿಂಚಣಿ ಪತ್ರದ ಪ್ರತಿಯನ್ನು ಕಡ್ಡಾಯ ಸಲ್ಲಿಸತಕ್ಕದ್ದು. ನಿವೃತ್ತ ಅಧಿಕಾರಿಗಳ ಮೇಲೆ ಯಾವುದೇ ಇಲಾಖಾ ವಿಚಾರಣೆ ಇರಕೂಡದು. ನಿವೃತ್ತ ಅಧಿಕಾರಿಯವರನ್ನು ಗುತ್ತಿಗೆ ಆಧಾರದ ಮೇಲೆ ಒಂದು ವರ್ಷದ ಅವಧಿಗೆ ಮಾತ್ರ ಪಡೆದುಕೊಳ್ಳಲಾಗುವುದು.

ನಿವೃತ್ತ ಅಧಿಕಾರಿಯವರು ನೀಡುವ ಸೇವೆಯ ಆಧಾರದ ಮೇಲೆ ಅವರ ಸೇವೆಯನ್ನು ಮುಂದುವರೆಸುವ ಹಾಗೂ ರದ್ದುಪಡಿಸುವ ಅಧಿಕಾರವು ಕಾರ್ಯದರ್ಶಿಗಳು ಕಕಪ್ರಅ ಮಂಡಳಿ ಕಲಬುರಗಿ ಮತ್ತು ಜಿಲ್ಲಾಧಿಕಾರಿಗಳು ರಾಯಚೂರು ಇವರಿಗೆ ಇರುತ್ತದೆ. ಕೋಶಗಳಲ್ಲಿ ಕಾರ್ಯನಿರ್ವಹಿಸುವ ಅಧಿಕಾರಿಗಳಿಗೆ ಯಾವುದೇ ವಾಹನದ ಸೌಕರ್ಯ ಒದಗಿಸಲು ಅವಕಾಶ ಇರುವುದಿಲ್ಲ. ಸಲಹೆಗಾರರು/ಅಧಿಕಾರಿಗಳು, ಜಿಲ್ಲಾಧಿಕಾರಿಯವರ ಕಚೇರಿ/ ಜಿಲ್ಲಾ ಪಂಚಾಯತ ಅನುಷ್ಠಾನಗೊಳಿಸುತ್ತಿರುವ ಕ.ಕ.ಪ್ರ.ಅ ಮಂಡಳಿಯ ಕಾಮಗಾ-ರಿಗಳ ಅಂದಾಜು ಪತ್ರಿಕೆಗಳನ್ನು ಪರಿಶೀಲನೆ ಮಾಡುವುದು, ಬಿಲ್ಲುಗಳನ್ನು ಪರಿಶೀಲಿಸುವುದು, ದೂರುಗಳಿಗೆ ಕ್ರಮವಹಿಸುವುದು ಮತ್ತು ಆರ್ಥಿಕ ಮತ್ತು ಭೌತಿಕ ಗುರಿ ಸಾಧಿಸುವುದು ಮತ್ತು ಅನುಷ್ಠಾನ ಇಲಾಖೆಗೊಳಂದಿಗೆ ಸಮನ್ವಯ ಸಾಧಿಸುವುದು.

ತಾಂತ್ರಿಕ ಸಲಹೆಗಾರರು ಅಥವಾ ಅಧಿಕಾರಿಗಳು ಜಿಲ್ಲಾಧಿಕಾರಿಯವರ ಕಚೇರಿ ಅಥವಾ ಜಿಲ್ಲಾ ಪಂಚಾಯತ ವತಿಯಿಂದ ತೆಗೆದುಕೊಳ್ಳುವ ಮಾಸಿಕ ಪ್ರಗತಿ ಪರಿಶೀಲನಾ ಸಭೆಯಲ್ಲಿ ಭಾಗವಹಿಸುವುದು ಮತ್ತು ಮಂಡಳಿ ಕಾಮಗಾರಿಗಳ ಕುರಿತು ಪ್ರಗತಿ ವರದಿಯನ್ನು ಸಲ್ಲಿಸುವುದು. ಆಯ್ಕೆಯಾದ ಅಧಿಕಾರಿಗಳಿಗೆ ಗೌರವಧನವನ್ನು ಕಕಪ್ರಅ ಮಂಡಳಿಯ ಆಡಳಿತ ವೆಚ್ಚದಡಿಯಲ್ಲಿ ಭರಿಸಲಾಗುವುದು. ಅರ್ಜಿ ಸಲ್ಲಿಸುವ ಅಧಿಕಾರಿಗಳು ಜಿಲ್ಲೆಯ ಕೇಂದ್ರ ಸ್ಥಳದಲ್ಲಿ ವಾಸಿಸುವುದು ಕಡ್ಡಾಯವಾಗಿರುತ್ತದೆ. ಕೋಶದಲ್ಲಿ ಇನ್ನಿತರೆ ಕೆಲಸಗಳನ್ನು ನಿರ್ವಹಿಸುವುದು.

ಆಸಕ್ತಿಯುಳ್ಳ ನಿವೃತ್ತ ಸರಕಾರಿ ಅಧಿಕಾರಿಗಳು, ಅರ್ಜಿ ಹಾಗೂ ಅವಶ್ಯಕ ದಾಖಲಾತಿಗಳೊಂದಿಗೆ ಈ ಕಾರ್ಯಲಯದಲ್ಲಿ ಪಡೆದು ಆಗಸ್ಟ್ 08ರ ಸಂಜೆ ಸ.30ಗಂಟೆಯೊಳಗಾಗಿ ಈ ಕಚೇರಿಗೆ ಕಚೇರಿ ವೇಳೆಯಲ್ಲಿ ಸಲ್ಲಿಸಬಹುದಾಗಿದೆ ಎಂದು ಜಿಲ್ಲಾಧಿಕಾ-ರಿಗಳಾದ ನಿತೀಶ್ ಕೆ. ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

www.janavaadi.in

ಪುಟ 3

# ಜನವಾದಿ

ರಾಯಚೂರು
ಕಲಬುರಗಿ
ಯಾದಗಿರಿ
ಕೊಪ್ಪಳ
ಬಳ್ಳಾರಿ
ಬೀದರ್

ಸಂಪಾದಕ : ಬಸವರಾಜ ಹೆಚ್
Editor : Basavaraj H

ಜನರ ಅಂತರಂಗದ ಧ್ವನಿ
ಕನ್ನಡ ದಿನಪತ್ರಿಕೆ

JANAVAADI
Kannada Daily News Paper

ಸಂಪುಟ : 12 ಸಂಚಿಕೆ : 07 ಪುಟ:4 ರಾಯಚೂರು ಶನಿವಾರ 02–08–2025 RNI NO.KARKAN/2012/56428 ಮೊಬೈಲ್: 9448300139,9449711232. e-mail : janavaadi@gmail.com ಬೆಲೆ : 2 ರೂ.
VOLUME : 12 ISSUE : 07 PAGES : 4 RAICHUR SATURDAY 02-08-2025 RNI NO.KARKAN/2012/56428 MOBILE:9448300139,9449711232. E-MAIL:janavaadi@gmail.com PRICE : 2 RS.

## ಯೂರಿಯಾ, ಡಿಎಪಿ, ಕಾಂಪ್ಲೆಕ್ಸ್ ರಸಗೊಬ್ಬರ ಕೊರತೆ ಆತಂಕ ಬೇಡ

ಜನವಾದಿ ವಾರ್ತೆ

ರಾಯಚೂರು ಆ 1 – 2025–26 ಸಾಲಿನ ಮುಂಗಾರು ಹಂಗಾಮಿಗೆ ಜಿಲ್ಲೆಗೆ ನಿಗದಿಪಡಿಸಿದ ಗುರಿಯಂತೆ ಹಂತ ಹಂತವಾಗಿ ವಿವಿಧ ಸಂಸ್ಥೆಗಳಿಂದ ಯೂರಿಯಾ, ಡಿ.ಎ.ಪಿ ಮತ್ತು ಕಾಂಪ್ಲೆಕ್ಸ್ ರಸಗೊಬ್ಬರ ಜಿಲ್ಲೆಗೆ ಬರುತ್ತಿದೆ.

ಮುಂಬರುವ ದಿನಗಳಲ್ಲಿ ಸಹ ರಸಗೊಬ್ಬರ ಜಿಲ್ಲೆಗೆ ಬರುತ್ತದೆ. ರೈತರು ರಸಗೊಬ್ಬರ ಕೊರತೆ ಇದೆ ಎಂದು ಭಾವಿಸದೆ ಬೆಳೆಗೆ ಬೇಕಾಗುವ ಒಟ್ಟು ರಸಗೊಬ್ಬರವನ್ನು ಒಂದೇ ಸಲ ಖರೀದಿಸಲು ಮುಂದಾಗಬಾರದು. ಬೆಳೆಗಳಿಗೆ ಬೇಕಾಗುವ ರಸಗೊಬ್ಬರವನ್ನು ಆಯಾ ಹಂತಕ್ಕೆ ಅವಶ್ಯಕತೆಗನುಗುಣವಾಗಿ ಮಾತ್ರ ಖರೀದಿಸಬೇಕೆಂದು ತಿಳಿಯಪಡಿಸಿದೆ. ರಸಗೊಬ್ಬರ ವಿತರಕರಿಗೆ ದಿನಾಂಕ: 01.08.2025 ರಂದು ಯೂರಿಯಾ ರಸಗೊಬ್ಬರವನ್ನು ನೀಡಲಾಗಿರುತ್ತದೆ. ರೈತರು ಬೆಳೆಗೆ ಅವಶ್ಯಕತೆ ಇರುವ ಆಧಾರದ ಮೇಲೆ ರಸಗೊಬ್ಬರವನ್ನು ಬೆಳೆಗೆ ನೀಡಬೇಕು ಮತ್ತು ಯೂರಿಯಾ ರಸಗೊಬ್ಬರವನ್ನು ಕಳೆನಾಶಕ ಜೊತೆಗೆ ಬಳಸದೆ ಅನ್ಯ ಮಾರ್ಗವಾಗಿ ಮರಳು ಅಥವಾ ಮಣ್ಣು ಬಳಸಬೇಕು ಹಾಗೂ ರಸಗೊಬ್ಬರದ ಕೊರತೆ ಬಗ್ಗೆ ಆತಂಕ ಪಡುವ ಅವಶ್ಯಕತೆ ಇರುವುದಿಲ್ಲ ಎಂದು ಜಂಟಿ ಕೃಷಿ ನಿರ್ದೇಶಕರು ರಾಯಚೂರ ಜಿಲ್ಲೆಯ ರೈತ ಬಾಂಧವರಲ್ಲಿ ಮನವಿ ಮಾಡಿದ್ದಾರೆ.

### ರಾಯಚೂರು ಪೇಟೆ ದರ

| | |
|---|---|
| **ಸಣ್ಣ ಭತ್ತ(ಸೋನಾ)** | |
| ಕನಿಷ್ಟ | 1780 |
| ಗರಿಷ್ಟ | 2019 |
| **ಒಣಕಡಲೆ** | |
| ಕನಿಷ್ಟ | 4689 |
| ಗರಿಷ್ಟ | 5239 |
| **ಕೆಂಪು ತೊಗರಿ** | |
| ಕನಿಷ್ಟ | 6109 |
| ಗರಿಷ್ಟ | 6542 |
| **ಶೇಂಗಾ (ಗುಂಗ್ರು)** | |
| ಕನಿಷ್ಟ | 3955 |
| ಗರಿಷ್ಟ | 5127 |
| **ಸೂರ್ಯಕಾಂತಿ** | |
| ಕನಿಷ್ಟ | – |
| ಗರಿಷ್ಟ | – |
| **ಈರುಳ್ಳಿ** | |
| ಕನಿಷ್ಟ | – |
| ಗರಿಷ್ಟ | – |

## ಕರ್ನಾಟಕದಲ್ಲಿ ಸಿಎಂ ಹುದ್ದೆ ಖಾಲಿ ಇಲ್ಲ; ವದಂತಿಗಳಿಗೆ ಬಿಜೆಪಿಯೇ ಕಾರಣ: ಪ್ರಿಯಾಂಕ್ ಖರ್ಗೆ!




ನವದೆಹಲಿ ಆ 1– ಕರ್ನಾಟಕದಲ್ಲಿ ಮುಖ್ಯಮಂತ್ರಿ ಸ್ಥಾನ ಖಾಲಿ ಇಲ್ಲ ಎಂದು ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಐಟಿ–ಬಿಟಿ ಸಚಿವ ಪ್ರಿಯಾಂಕ್ ಖರ್ಗೆ ಶುಕ್ರವಾರ ಹೇಳಿದ್ದಾರೆ. ಬಿಕ್ಕಟ್ಟಿಗೆ ಸಿಲುಕಿರುವ ರಾಜ್ಯ ಬಿಜೆಪಿ ತನ್ನ ನ್ಯೂನತೆಗಳಿಂದ ಗಮನವನ್ನು ಬೇರೆಡೆಗೆ ಸೆಳೆಯಲು ಇಂತಹ ವದಂತಿಗಳನ್ನು ಹಬ್ಬಿಸುತ್ತಿದೆ ಎಂದು ಆರೋಪಿಸಿದ್ದಾರೆ.

ಕೇಂದ್ರ ಮಟ್ಟದಲ್ಲಾಗಲಿ ಅಥವಾ ರಾಜ್ಯ ಮಟ್ಟದಲ್ಲಾಗಲಿ ಕಾಂಗ್ರೆಸ್ ಪಕ್ಷ, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಬದಲಾಯಿಸುವ ಯಾವುದೇ ಪ್ರಸ್ತಾಪವಿಲ್ಲ ಎಂದು ಅವರು ಪಿಟಿಐ ಸುದ್ದಿಸಂಸ್ಥೆಗೆ ನೀಡಿದ ಸಂದರ್ಶನದಲ್ಲಿ ಸ್ಪಷ್ಟಪಡಿಸಿದ್ದಾರೆ.

ರಾಜ್ಯದಲ್ಲಿ ನಾಯಕತ್ವ ಬದಲಾವಣೆ ಇಲ್ಲ ಎಂದು ಎಐಸಿಸಿ ಅಧ್ಯಕ್ಷರಾದ ಮಲ್ಲಿಕಾರ್ಜುನ ಕರ್ಗೆ, ಪ್ರಧಾನ ಕಾರ್ಯದರ್ಶಿ ಕೆ. ಸಿ. ವೇಣುಗೋಪಾಲ್, ಉಸ್ತುವಾರಿ ಪ್ರಧಾನ ಕಾರ್ಯದರ್ಶಿ ರಣದೀಪ್ ಸುರ್ಜೇವಾಲಾ, ಸಿಎಂ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿಕೆ ಶಿವಕುಮಾರ್ ಅವರೇ ಹೇಳುತ್ತಿರುವಾಗ, ಇಂತಹ ವಿಚಾರಗಳು ಎಲ್ಲಿಂದ ಬರುತ್ತೋ ಗೊತ್ತಿಲ್ಲ ಎಂದು ಹೇಳಿದರು.

ಕಾಂಗ್ರೆಸ್ ವರಿಷ್ಟರು ಈ ವಿಷಯದ ಬಗ್ಗೆ ಬಹಳ ಸ್ಪಷ್ಟವಾಗಿದ್ದಾರೆ. ಹಾಗಾಗಿ ಬಿಜೆಪಿ ಮಾತನಾಡಬೇಕಾದ ಈ ಪ್ರಶ್ನೆಗಳಿಗೆ ನಾವು ಉತ್ತರಿಸುವ ಅಗತ್ಯವಿಲ್ಲ ಎಂದು ಭಾವಿಸುತ್ತೇನೆ ಎಂದರು.

ನಾಯಕತ್ವ ಬದಲಾವಣೆಯ ಊಹಾಪೋಹಗಳ ಮೂಲದ ಬಗ್ಗೆ ಪ್ರತಿಕ್ರಿಯಿಸಿದ ಖರ್ಗೆ, ಪ್ರತಿಪಕ್ಷ ಬಿಜೆಪಿ ತಮ್ಮ ದೌರ್ಬಲ್ಯವನ್ನು ಮರೆಮಾಡಲು ಪ್ರಯತ್ನಿಸುತ್ತಿದೆ. ಸದ್ಯ ರಾಜ್ಯದಲ್ಲಿ ಬಿಜೆಪಿ ಸಂಪೂರ್ಣ ಛಿದ್ರ ಛಿದ್ರವಾಗಿರುವ ಪಕ್ಷವಾಗಿದೆ. ಅವರಲ್ಲಿ ನಾಯಕರೇ ಇಲ್ಲ. ಬಿಜೆಪಿಯಲ್ಲಿ ಸಾಕಷ್ಟು ಅವ್ಯವಸ್ಥೆ ಇದೆ.ಅದು ಸದನದಲ್ಲಿಯೂ ಸ್ಪಷ್ಟವಾಗಿ ಕಾಣಿಸುತ್ತದೆ ಎಂದು ಹೇಳಿದರು.

ಯಾವುದಾದರೊಂದು ವಿಷಯದ ಬಗ್ಗೆ ನಿಲುವು ತೆಗೆದುಕೊಳ್ಳುವಾಗ ಬಿಜೆಪಿಯ ಅರ್ಧದಷ್ಟು ಶಾಸಕರು ವಿಧಾನಸಭೆಯಿಂದ ಹೊರನಡೆದರೆ ಉಳಿದವರು ಸದನದ ಬಾವಿಗೆ ಇಳಿಯುತ್ತಾರೆ. ಹಾಗಾಗಿ ಅವರಲ್ಲಿ ನಾಯಕತ್ವದ ಸಮಸ್ಯೆಗಳಿವೆ.

ಬಿಜೆಪಿಯಲ್ಲಿ ಬಿಕ್ಕಟ್ಟು ಇದೆ. ಪ್ರತಿ ಎರಡು ದಿನಗಳಿಗೊಮ್ಮೆ ವಿಜಯೇಂದ್ರ ಹಾಗೂ ಆರ್. ಅಶೋಕ್ ನಾವೇ ತಮ್ಮ ಸ್ಥಾನದಲ್ಲಿ ಮುಂದುವರಿಯುತ್ತೇವೆ ಎಂದು ಹೇಳುತ್ತಿರುತ್ತಾರೆ. ಆದ್ದರಿಂದ ಅವರ ನ್ಯೂನತೆ, ದೌರ್ಬಲ್ಯ, ಅನೈತಿಕತೆಯನ್ನು ಮರೆಮಾಡಲು ಇಂತಹ ಪಿತೂರಿ ನಡೆಸುತ್ತಲೇ ಬಂದಿದ್ದಾರೆ ಎಂದು ವಾಗ್ದಾಳಿ ನಡೆಸಿದರು.

## ಸೌರಶಕ್ತಿ ಉತ್ಪಾದನೆ: ಜಪಾನ್ ಹಿಂದಿಕ್ಕಿ, ವಿಶ್ವದ ಮೂರನೇ ಅತಿದೊಡ್ಡ ರಾಷ್ಟ್ರವಾಗಿ ಹೊರಹೊಮ್ಮಿದ ಭಾರತ!



ನವದೆಹಲಿ ಆ 1– ಸೌರಶಕ್ತಿ ಉತ್ಪಾದನೆಯಲ್ಲಿ ಭಾರತ ಈಗ ಜಪಾನ್‌ಗಿಂತ ಮುಂದಿದ್ದು, 1,08,494 GWh (ಗಿಗಾವ್ಯಾಟ್ ಗಂಟೆ) ವಿದ್ಯುತ್ ಉತ್ಪಾದಿಸುತ್ತಿದೆ ಎಂದು ಕೇಂದ್ರ ನವೀಕರಿಸಬಹುದಾದ ಇಂಧನ ಸಚಿವ ಪ್ರಲ್ಹಾದ ಜೋಶಿ ಹೇಳಿದ್ದಾರೆ.

ನವದೆಹಲಿಯಲ್ಲಿಂದು ಈ ಮಾಹಿತಿ ಹಂಚಿಕೊಂಡ ಸಚಿವರು, ಜಪಾನ್ ಸದ್ಯ 96,459 GWh ವಿದ್ಯುತ್ ಉತ್ಪಾದಿಸುತ್ತಿದ್ದರೆ ಭಾರತ 1,08,494 ಉಘು ವಿದ್ಯುತ್ ಉತ್ಪಾದಿಸಿ ಮುಂಚೂಣಿಯಲ್ಲಿದೆ. ಪಳೆಯುಳಿಕೆಯೇತರ ವಿದ್ಯುತ್ ಉತ್ಪಾದನೆ ಸಾಮರ್ಥ್ಯದ ಶೇ.50ರಷ್ಟನ್ನು ಅದಾಗಲೇ ಸಾಧಿಸಿದೆ ಎಂದು ಹೇಳಿದರು.

ಸೌರಶಕ್ತಿ ಉತ್ಪಾದನೆಯಲ್ಲಿ ವಿಶ್ವದ 3ನೇ ಅತಿದೊಡ್ಡ ರಾಷ್ಟ್ರ: ಸೌರಶಕ್ತಿ ಉತ್ಪಾದನೆಯಲ್ಲಿ ಭಾರತವೀಗ ಜಪಾನ್ ಅನ್ನು ಹಿಂದಿಕ್ಕುವ ಮೂಲಕ ಮೂರನೇ ಅತಿದೊಡ್ಡ ದೇಶವಾಗಿ ಹೊರ ಹೊಮ್ಮಿದೆ. ಚೀನಾ ಮತ್ತು ಅಮೆರಿಕ ನಂತರದ ಸ್ಥಾನದಲ್ಲಿ ಭಾರತ ರಾರಾಜಿಸುತ್ತಿದೆ. ಭಾರತ ವಿಶ್ವದ

☛4

## ರಾಯಚೂರು ವಿಮಾನ ನಿಲ್ದಾಣ ನಿರ್ಮಾಣ ಕಾಮಗಾರಿ ಸ್ಥಳಕ್ಕೆ ಜಿಲ್ಲಾಧಿಕಾರಿಗಳಾದ ನಿತೀಶ್ ಕೆ ಭೇಟಿ; ಪರಿಶೀಲನೆ



ಜನವಾದಿ ವಾರ್ತೆ

ರಾಯಚೂರು ಆ 31– ಜಿಲ್ಲಾಧಿಕಾರಿಗಳಾದ ನಿತೀಶ್ ಕೆ ಅವರು ಆಗಸ್ಟ್ 1ರಂದು, ರಾಯಚೂರಿನಲ್ಲಿ ವಿಮಾನ ನಿಲ್ದಾಣ ನಿರ್ಮಾಣ ಕಾಮಗಾರಿಯ ಉದ್ದೇಶಿತ ಸ್ಥಳವಾದ ಯರಮರಸ್ ಹೊರವಲಯದ ಪ್ರದೇಶಕ್ಕೆ ಭೇಟಿ ನೀಡಿ ಕಾಮಗಾರಿ ಪರಿಶೀಲಿಸಿದರು.

ಪ್ರಸ್ತುತ ವಿಮಾನ ನಿಲ್ದಾಣದ ಬಾಂಡರಿ ನಿರ್ಮಾಣ ಕಾಮಗಾರಿ ಹಾಗೂ ಪ್ಯಾಸೆಂಜರ್ ಟರ್ಮಿನಲ್ ಕಟ್ಟಡಕ್ಕೆ ಬುನಾದಿ ಫೂಟಿಂಗ್ ಹಾಕುವ ಕಾಮಗಾರಿಯ ಪರಿವೀಕ್ಷಣೆ ನಡೆಸಿದರು.

ವಿಮಾನ ನಿಲ್ದಾಣ ಕಾಮಗಾ–ರಿಯಲ್ಲಿ ಪ್ರಸ್ತಾಪಿಸಿರುವ ರನ್‌ವೇ, ಸಿಆರ್‌ಎಫ್ ಕಟ್ಟಡ, ಎಟಿಸಿ ಕಟ್ಟಡ ಮತ್ತು ಮಾಸ್ಟರ್ ಪ್ಲಾನ್‌ದಲ್ಲಿ ತೋ–ರಿಸಿದಂತೆ ಸದರಿ ಸ್ಥಳದ ವೀಕ್ಷಣೆ ನಡೆಸಿದರು.

ಕಾಮಗಾರಿಯ ಪ್ರಗತಿಯ ಬಗ್ಗೆ ಇದೆ ವೇಳೆ ಗುತ್ತಿಗೆದಾರರೊಂದಿಗೆ ಚರ್ಚಿಸಿದ ಜಿಲ್ಲಾಧಿಕಾರಿಗಳು, ಕಾಮಗಾರಿಯನ್ನು ತ್ವರಿತಗೊಳಿಸಿ ಬೇಗನೆ ಪೂರ್ಣಗೊಳಿಸಬೇಕು ಎಂದು ಕಟ್ಟುನಿಟ್ಟಿನ ನಿರ್ದೇಶನ ನೀಡಿದರು.

ಈ ಸಂದರ್ಭದಲ್ಲಿ ಲೋಕೋಪಯೋಗಿ ಇಲಾಖೆಯ ಸಹಾಯಕ ಕಾರ್ಯಪಾಲಕ ಅಭಿಯಂತರರಾದ ರಾಘವೇಂದ್ರ, ಮಹೇಶಕುಮಾರ ಹಾಗೂ ಸಂಬಂಧಿಸಿದ ಗುತ್ತಿಗೆದಾರರ ಎಂಜಿನಿಯರು ಇದ್ದರು.

## ಶಾರ್ಟ್ ಸರ್ಕ್ಯೂಟ್‌ನಿಂದ ತಹಶೀಲ್ದಾರ್ ಕಚೇರಿಯಲ್ಲಿ ಅಗ್ನಿ ಅವಘಡ; ಮಹತ್ವದ ದಾಖಲೆಗಳು ಭಸ್ಮ



ಜನವಾದಿ ವಾರ್ತೆ

ದೇವದುರ್ಗ ಆ 1– ತಾಲೂಕಿನ ಗಬ್ಬೂರು ನಾಡ ತಹಶೀಲ್ದಾರ ಕಚೇರಿಯಲ್ಲಿ ಶಾರ್ಟ್ ಸರ್ಕ್ಯೂಟ್‌ನಿಂದ ಬೆಂಕಿ ಹೊತ್ತಿಕೊಂಡು ಮಹತ್ವದ ದಾಖಲೆಗಳು, ಲಕ್ಷಾಂತರ ರೂ. ಮೌಲ್ಯದ ವಸ್ತುಗಳು ಬೆಂಕಿಗಾಹುತಿಯಾಗಿವೆ.

ರಾತ್ರಿ ವೇಳೆ ಅಗ್ನಿ ಅವಘಡ ನಡೆದಿದ್ದು ಕಂಪ್ಯೂಟರ್, ಸಾರ್ವಜನಿಕರ ಮಹತ್ವದ ದಾಖಲೆಗಳು, ಪೀಠೋಪಕರಣಗಳು ಸುಟ್ಟು ಕರಕಲಾಗಿವೆ. ಮಳೆಯಿಂದ ಹಳೆಯ ಕಟ್ಟಡದ ಗೋಡೆಗಳು ಒದ್ದೆಯಾಗಿದ್ದು ಅಲ್ಲಲ್ಲಿ ಸೋರಿದ್ದರಿಂದ ಶಾರ್ಟ್ ಸರ್ಕ್ಯೂಟ್ ಉಂಟಾಗಿದೆ. ಇನ್ವೆಟರ್‌ನಲ್ಲಿ ಬೆಂಕಿ ಕಾಣಿಸಿಕೊಂಡು ಸ್ಫೋಟಗೊಂಡಿದೆ. ಇದರಿಂದ ಕಚೇರಿಯಲ್ಲಿನ ವಸ್ತುಗಳೆಲ್ಲಾ ಸುಟ್ಟು ಕರಕಲಾಗಿವೆ.

ಎರಡನೇ ಬಾರಿ ನಾಡ ತಹಶಿಲ್ದಾರ ಕಚೇರಿ ಅಗ್ನಿದುರಂತಕ್ಕೆ ಈಡಾಗಿದೆ. ಮಹತ್ವದ ದಾಖಲೆಗಳು ಸುಟ್ಟು ಹೋಗಿರುವುದರಿಂದ ಸಾರ್ವಜನಿಕರು ಆಕ್ರೋಶ ವ್ಯಕ್ತಪಡಿಸಿದ್ದಾರೆ. ಗಬ್ಬೂರು ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಘಟನೆ ನಡೆದಿದೆ.

## ಒಳಮೀಸಲಾತಿ ಜಾರಿಗೆ ಒತ್ತಾಯಿಸಿ ಅರೆಬೆತ್ತಲೆ ಪ್ರತಿಭಟನೆ



ಜನವಾದಿ ವಾರ್ತೆ

ರಾಯಚೂರು ಆ 1 – ಒಳ ಮೀಸಲಾತಿ ಜಾರಿಗೆ ಒತ್ತಾಯಿಸಿ ಒಳ ಮೀಸಲಾತಿ ಜಾರಿ ಹೋರಾಟ ಸಮಿತಿ ನೇತೃತ್ವದಲ್ಲಿ ಮಾದಿಗ ಸಮಾಜದ ಮುಖಂಡರಿಂದ ಅರೆಬೆತ್ತಲೆ ಬೃಹತ್ ಪ್ರತಿಭಟನೆಯನ್ನು ನಗರದ ಡಾ ಬಿ.ಆರ್ ಅಂಬೇಡ್ಕರ್ ವೃತ್ತದಲ್ಲಿ ನಡೆಸಿದರು.

ಅಂಬೇಡ್ಕರ್ ವೃತ್ತದಲ್ಲಿ ಮಾನವ ಸರಪಳಿ ನಿರ್ಮಿಸಿ ಒಂದು ತಾಸಿಗೂ ಹೆಚ್ಚು ಕಾಲ ರಸ್ತೆ ತಡೆ ನಡೆಸಿದರು. ನಂತರ ಅರೆಬೆತ್ತಲೆಯಾಗಿ ರಾಜ್ಯ ಸರ್ಕಾರದ ವಿರುದ್ಧ ಘೋಷಣೆ ಕೂಗಿದರು. ರಾಜ್ಯ ಸರ್ಕಾರ ಕೊಟ್ಟ ಮಾತಿನಂತೆ ನಡೆದುಕೊಳ್ಳುತ್ತಿಲ್ಲ. ಸುಪ್ರಿಂಕೋರ್ಟ್ ಒಳ ಮೀಸಲಾತಿ ಜಾರಿಗೆ ನಿರ್ದೇಶನ ನೀಡಿದ್ದರೂ ರಾಜ್ಯ ಸರ್ಕಾರ ಕಾಲಹರಣ ಮಾಡುತ್ತಿದೆ ಎಂದು ಪ್ರತಿಭಟನಾಕಾರರು ಆಕ್ರೋಶ ವ್ಯಕ್ತಪಡಿಸಿದರು.

ಒಳ ಮೀಸಲಾತಿ ಹೋರಾಟ ಸಮಿತಿ ಸಂಚಾಲಕ ಎಂ.ವಿರುಪಾಕ್ಷಿ ಮಾಧ್ಯಮಗಳೊಂದಿಗೆ ಮಾತನಾಡಿ, ಒಳ ಮೀಸಲಾತಿ ಗಾಗಿ ಅನೇಕ ವರ್ಷಗಳಿಂದ ಹೋರಾಟ ಮಾಡುತ್ತಿದ್ದರೂ ರಾಜ್ಯ ಸರ್ಕಾರ ಕಾಲಹರಣ ಮಾಡಿ ಸಮಾಜವನ್ನು ನಿರ್ಲಕ್ಷ್ಯ ವಹಿಸಿದೆ. ಮುಂದಿನ 15 ದಿನಗಳಲ್ಲಿ ಒಳಮೀಸಲಾತಿ ಜಾರಿ ಮಾಡದಿದ್ದರೆ ಮಾದಿಗ ಸಮುದಾಯದ 10 ರಿಂದ 15 ಲಕ್ಷ ಜನರು ಇಡೀ ಬೆಂಗಳೂರಿಗೆ ಮುತ್ತಿಗೆ ಹಾಕಿ ಒಂದೇ ಒಂದು ವಾಹನ ರಸ್ತೆಗಿಳಿಯದಂತೆ ಮಾಡುತ್ತೇವೆಂದು ಎಚ್ಚರಿಕೆ ನೀಡಿದರು.

ಒಳ ಮೀಸಲಾತಿಗೆ ಇನ್ನು 15 ದಿನಗಳೊಳಗೆ ಜಾರಿ ಆದೇಶ ನೀಡದಿದ್ದರೆ ಬೆಂಗಳೂರು ಮುತ್ತಿಗೆ ಹಾಕಲಾಗುವುದು. 25 ಲಕ್ಷ ಮಾದಿಗ ಶಕ್ತಿ ತೋರಿಕೆಗೆ ಮುಂದಾಗಲಿದೆ. ಸರ್ಕಾರದ ಕುರುಡುತನ, ನಾಯಕರೆನಿಸಿಕೊಂಡವರ ಮೌನತೆಂಯೇ ನಮ್ಮನ್ನು ಆಕ್ರೋಶಗೊಳ್ಳುವಂತೆ ಮಾಡುತ್ತಿದೆ. ಮಾದಿಗ ಶಕ್ತಿಯನ್ನು ಲಘುವಾಗಿ ತೆಗೆದುಕೊಳ್ಳಬಾರದು ಹದಿನೈದು ದಿನದೊಳಗೆ ಒಳಮೀಸಲಾತಿಯನ್ನು ಜಾರಿಗೊಳಿಸುವಂತೆ ಎಚ್ಚರಿಸಿದರು.

☛4

## ಜಿಲ್ಲಾಡಳಿತದಿಂದ ಡಾ.ಮಹಾಂತ ಶಿವಯೋಗಿಗಳ ಜನ್ಮದಿನ, ವ್ಯಸನಮುಕ್ತ ದಿನಾಚರಣೆ



ಜನವಾದಿ ವಾರ್ತೆ

ರಾಯಚೂರು ಆ 01 – ಶ್ರೀ ಮ.ನಿ.ಪ್ರ.ಡಾ.ಮಹಾಂತ ಶಿವಯೋಗಿಗಳ ಜನ್ಮದಿನ ಹಾಗೂ ವ್ಯಸನಮುಕ್ತ ದಿನಾಚರಣೆ ಕಾರ್ಯಕ್ರಮವು ನಗರದಲ್ಲಿ ಆಗಸ್ಟ್ 1ರಂದು ನಡೆಯಿತು. ಇದೆ ವೇಳೆ, ಡಾ.ಮಹಾಂತ ಶಿವಯೋಗಿಗಳ ಭಾವಚಿತ್ರಕ್ಕೆ ಪೂಜೆ ಸಲ್ಲಿಸಲಾಯಿತು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಮಹಾನಗರ ಪಾಲಿಕೆ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ರಾಯಚೂರು ಹಾಗೂ ಕರ್ನಾಟಕ ರಾಜ್ಯ ಮದ್ಯಪಾನ ಸಂಯಮ ಮಂಡಳಿ ಬೆಂಗಳೂರು, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಹಾಗೂ ಎಸ್.ಕೆ.ಇ. ಪ್ಯಾರಾ ಮೆಡಿಕಲ್ ಶಿಕ್ಷಣ ಸಂಸ್ಥೆ ರಾಯಚೂರು ಇವರ ಆಶ್ರಯದಲ್ಲಿ ನಗರದ ಎಸ್.ಕೆ.ಇ. ಪ್ಯಾರಾ ಮೆಡಿಕಲ್ ಶಿಕ್ಷಣ ಸಂಸ್ಥೆಯ ಸಭಾಂಗಣದಲ್ಲಿ ನಡೆದ ಕಾರ್ಯಕ್ರಮವನ್ನು ತಹಸೀಲ್ದಾರರಾದ ಸುರೇಶ ವರ್ಮಾ ಅವರು ಸಸಿಗೆ ನೀರು ಹಾಕುವ ಮೂಲಕ ಉದ್ಘಾಟಿಸಿದರು.

ಬಳಿಕ ಮಾತನಾಡಿದ ಅವರು, ಬದುಕು ತುಂಬಾ ದೊಡ್ಡದು. ಮಾದಕ ವಸ್ತುಗಳ ವ್ಯಸನದಿಂದ ಜೀವನ ಹಾಳು ಮಾಡಿಕೊಳ್ಳಬಾರದು. ವಿದ್ಯಾರ್ಥಿ ಯುವಜನರು ಆರೋಗ್ಯದ ಬಗ್ಗೆ ಕಾಳಜಿ ವಹಿಸಬೇಕು. ಡಾ.ಮಹಾಂತ ಶಿವಯೋಗಿಗಳ ಜನ್ಮದಿನದ ಈ ಶುಭ ಸಂದರ್ಭದಲ್ಲಿ ನಾನು ದುಶ್ಚಟ ಮಾಡುವುದಿಲ್ಲ ಎನ್ನುವ ಸಂಕಲ್ಪ ಹೊಂದಿ ವಿದ್ಯಾರ್ಥಿಗಳು ಮನ ಪರಿವರ್ತನೆ ಮಾಡಿಕೊಳ್ಳಬೇಕು ಎಂದು ತಿಳಿಸಿದರು.

ಮುಖ್ಯ ಅತಿಥಿಗಳಾದ ಎಸ್.ಕೆ.ಇ. ಪ್ಯಾರಾ ಮೆಡಿಕಲ್ ಶಿಕ್ಷಣ ಸಂಸ್ಥೆಯ ಪ್ರಾಚಾರ್ಯರಾದ ಡಾ.ಬಾಬುರಾವ್ ಎಂ ಶೇಗುಣಸಿ ಅವರು ಮಾತನಾಡಿ, ಕುಡಿತದ ವ್ಯಸನಕ್ಕೆ ವ್ಯಕ್ತಿಯೊಬ್ಬ ಬಲಿಯಾಗಿ ಇಡೀ ಸಂಸಾರವೇ ಬೀದಿಪಾಲಾದ ಉದಾಹರಣೆಗಳು ನಮ್ಮ ಮುಂದಿವೆ. ಈ ಬಗ್ಗೆ ವಿದ್ಯಾರ್ಥಿಗಳು ಅರಿತು ಮನೆಯಲ್ಲಿನ ಕುಟುಂಬದವರಿಗೆ ಯಾವುದೇ ವ್ಯಸನಕ್ಕೆ ಬಲಿಯಾಗದಂತೆ ತಿಳಿವಳಿಕೆ ಮೂಡಿಸಬೇಕು ಎಂದು ಸಲಹೆ ಮಾಡಿದರು.

ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಈಶ್ವರ ದಾಸಪ್ಪನವರ ಮಾತನಾಡಿ, ನಾನು ಯಾವುದೇ ದುಶ್ಚಟವನ್ನು ಮಾಡುವುದಿಲ್ಲ ಎಂದು ಪ್ರತಿಯೊಬ್ಬರು ಸಂಕಲ್ಪ ಮಾಡಿ ಮುಂದುವರೆದಲ್ಲಿ ವ್ಯಕ್ತಿಯು ಸದಾಕಾಲ ಆರೋಗ್ಯದಿಂದ ಇರಬಹುದು. ಉತ್ತಮ ವ್ಯಕ್ತಿಯಾಗಿ ಸಮಾಜದಲ್ಲಿ ಗುರುತಿಸಿಕೊಳ್ಳಬಹುದು ಎಂದು ತಿಳಿಸಿದರು.

ವಿಶೇಷ ಉಪನ್ಯಾಸ: ಜಿಲ್ಲಾ ಮಾನಸಿಕ ಆರೋಗ್ಯ ಕಾರ್ಯಕ್ರಮದ ಮಾನಸಿಕ ರೋಗ ತಜ್ಞರಾದ ಡಾ.ಮನೋಹರ ಪತ್ತಾರ ಅವರು ವಿಶೇಷ ಉಪನ್ಯಾಸ ನೀಡಿ, ಮಹಾಂತ ಶಿವಯೋಗಿಗಳು ಬರೀ ವಿಜಯಪುರ, ಬಾಗಲಕೋಟೆ ಜಿಲ್ಲೆಗಳು ಹಾಗೂ ಕರ್ನಾಟಕದಲ್ಲಷ್ಟೇ ಅಲ್ಲ ವಿದೇಶಗಳಲ್ಲು ಸಹ ಜೋಳಿಗೆ ಅಭಿಯಾನ ನಡೆಸಿ ಜನರನ್ನು ಜಾಗೃತಗೊಳಿಸಿದ ಮಹಾತ್ಮರಾಗಿದ್ದಾರೆ. ಡಾ.ಮಹಾಂತ ಶಿವಯೋಗಿಗಳು ತಿಳಿಸಿದ ಜೀವನ ಮೌಲ್ಯಗಳನ್ನು ನಾವು ಪಾಲನೆ ಮಾಡಬೇಕು ಎಂದರು.

ದುಶ್ಚಟಕ್ಕೆ ಬಲಿಯಾದ ವ್ಯಕ್ತಿಯು ಹೆಚ್ಚಾಗಿ ದುರಾಲೋಚನೆಗಳನ್ನೆ ಮಾಡುತ್ತಾನೆ. ವಿಚಾರ ಶಕ್ತಿಯನ್ನು ಕಳೆದುಕೊಂಡು ನಕಾರಾತ್ಮಕವಾಗಿ ಯೋಚಿಸಿ ಕೊಲೆ ಸುಲಿಗೆ ಮಾಡಲು ಸಹ ಹಿಂದೆ ಸರಿಯುವುದಿಲ್ಲ. ಕುಡಿತಕ್ಕೆ ಒಳಗಾದ ವ್ಯಕ್ತಿಯು ಕೆಲವೊಮ್ಮೆ ನಾನೇ ಶ್ರೇಷ್ಟ ಎಂದು ಹೇಳುತ್ತ ಮೈಮನಸುಗಳ ಮೇಲೆ ಹಿಡಿತವಿಲ್ಲದೇ ವರ್ತಿಸುವುದನ್ನು ಕಾಣಬಹುದು. ಹಾಗಾಗಿ ಯಾರು ಸಹ ದುಶ್ಚಟಕ್ಕೆ ಬಲಿಯಾಬಾರದು. ಉತ್ತಮವಾದ ಹವ್ಯಾಸಗಳನ್ನು ರೂಢಿಸಿಕೊಂಡು ಮಾದಕ ವಸ್ತು ಮುಕ್ತ ಸಮಾಜ ಕಟ್ಟಲು ಶ್ರಮಿಸಬೇಕು ಎಂದು ತಿಳಿಸಿದರು.

ವಾರ್ತಾ ಇಲಾಖೆಯ ವಾರ್ತಾ ಸಹಾಯಕರಾದ ಗವಿಸಿದ್ದಪ್ಪ ಹೊಸಮನಿ ಅವರು ಪ್ರಾಸ್ತಾವಿಕ ಮಾತನಾಡಿ, ಆಸ್ತಿ, ಸಂಪತ್ತಿಗಿಂತ ಆರೋಗ್ಯ ತುಂಬಾ ಮುಖ್ಯ. ನಮ್ಮಲ್ಲಿ ಆರೋಗ್ಯ ಇಲ್ಲದಿದ್ದರೆ ಸಿರಿವಂತಿಕೆ ಇದ್ದರೂ ಪ್ರಯೋಜನಕ್ಕೆ ಬಾರದು. ಉತ್ತಮ ಆರೋಗ್ಯ ಕಾಯ್ದುಕೊಂಡು ಜೀವಿತಾವಧಿಯನ್ನು ಹೆಚ್ಚಿಸಿಕೊಳ್ಳುವುದು ಕೂಡ ಸಾಧನೆಯೇ ಆಗಿದೆ. ಡಾ.ಮಹಾಂತ ಶಿವಯೋಗಿಗಳು ಕೈಗೊಂಡ ಅಭಿಯಾನದ ಉದ್ದೇಶ ಇದೇ ಆಗಿತ್ತು. ಸ್ವಾಮೀಜಿಯವರ ಜನ್ಮದಿನವನ್ನು ಸರ್ಕಾರವು ವ್ಯಸನಮುಕ್ತ ದಿನ ಎಂಬುದಾಗಿ ಆಚರಿಸುತ್ತಿರುವುದು ಅರ್ಥಪೂರ್ಣ ಸಂದೇಶವಾಗಿದೆ ಎಂದು ತಿಳಿಸಿದರು.

ಪ್ರತಿಜ್ಞಾ ವಿಧಿ ಬೋಧನೆ: ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್‌ನ ಜಿಲ್ಲಾ ಸಹ ಕಾರ್ಯದರ್ಶಿ ದಂಡಪ್ಪ ಬಿರಾದಾರ ಅವರು

☛4

## ಅರಕೇರಾ ತಾಲೂಕು ರಚನೆ ಅವೈಜ್ಞಾನಿಕ – ಶರಣಗೌಡ ಸುಂಕೇಶ್ವರಹಾಳ್



ಜನವಾದಿ ವಾರ್ತೆ

ರಾಯಚೂರು ಆ 1– ದೇವದುರ್ಗ ತಾಲೂಕಿನಲ್ಲಿ ನೂತನವಾಗಿ ರಚನೆಗೊಂಡಿರುವ ಅರಕೇರಾ ತಾಲೂಕು ರಚನೆ ಸಂಪೂರ್ಣ ಅವೈಜ್ಞಾನಿಕವಾಗಿದ್ದು , ಅರಕೇರಾ ವ್ಯಾಪ್ತಿಗೆ ಒಳಪಡುವ ವಿವಿಧ ಗ್ರಾಮಗಳನ್ನು ಕೈ ಬಿಟ್ಟು ಸರ್ಕಾರವು ದೇವದುರ್ಗದಲ್ಲಿ ಮುಂದುವರೆಸುವಂತೆ ಶರಣಗೌಡ ಸುಂಕೇಶ್ವರಹಾಳ್ ತಿಳಿಸಿದರು.

ಅವರಿಂದು ನಗರದ ಪತ್ರಿಕಾ ಭವನದಲ್ಲಿ ಸುದ್ದಿಗೋಷ್ಠಿಯನ್ನು ಉದ್ದೇಶಿಸಿ ಮಾತನಾಡಿದವರು.

ಈಗಾಗಲೇ ರಾಮದುರ್ಗ, ಪಲಕನಮರಡಿ, ಮುಂಡರಗಿ, ಹೊಸೂರು ಸಿದ್ದಾಪೂರು, ಗಾಣಧಾಳ, ಮಲದಕಲ್ ಹಾಗೂ ಇತರೆ ಗ್ರಾಮ ಪಂಚಾಯತಿಗಳ ಸಾಮಾನ್ಯ ಸಭೆಯಲ್ಲಿ ಚರ್ಚೆ ಮಾಡಿ, ನೂತನ ಅರಕೇರಾ ತಾಲೂಕಿನಿಂದ ಈ ಪಂಚಾಯತಿಗಳ ಗ್ರಾಮಗಳನ್ನು ಕೈಬಿಡುವಂತೆ ಸಭೆಯಲ್ಲಿ ನಿರ್ಣಯಿಸಿ ಸಭೆಯ ನಡುವಳಿಗಳನ್ನು ಜಿಲ್ಲಾಧಿಕಾ–ರಿಗಳಿಗೆ ಸಲ್ಲಿಸಲಾಗಿದೆ. ನೂತನ ಅರಕೇರಾ ತಾಲೂಕಿಗೆ ಈ ಗ್ರಾಮ ಪಂಚಾಯತಿಗಳ ಗ್ರಾಮಗಳ ಸುಳ್ಳು ದಾಖಲೆಗಳನ್ನು ನೀಡಿ ಹಾಗೂ ಈ ಗ್ರಾಮಗಳಿಂದ ಸುಳ್ಳು ಅಂತರಗಳನ್ನು ಸೇರ್ಪಡೆ ಮಾಡಿ ಹಿಂದಿನ ಶಾಸಕರು ತಮ್ಮ ಅಧಿಕಾರ ದುರ್ಬಳಕೆ ಮಾಡಿಕೊಂಡು, ಅಧಿಕಾರಿಗಳ ಮೇಲೆ ಒತ್ತಡ ಹೇರಿ, ಅರಕೇರಾ ತಾಲೂಕು ರಚನೆ ಮಾಡಿಕೊಳ್ಳಲಾಗಿದೆ. ಈ ನೂತನ ಅರಕೇರಾಕ್ಕೆ ಈ ಭಾಗದ ಹಳ್ಳಿಯ ಜನರು ಹೋಗಬೇಕೆಂದರೆ, ಸುಮಾರು 60 ಕೀ.ಮೀಟರ್ ಅಂತರ ದಾಟಿ ಹೋಗಾಬೇಕಾಗಿದೆ. ನೂತನ ತಾಲೂಕಿನಲ್ಲಿ ಕೇಂದ್ರದಲ್ಲಿ ಯಾವುದೇ ಮೂಲಭೂತ ಸೌಕರ್ಯಗಳು ಇಲ್ಲದೇ ರೈತರು ಪಹಣಿ, ಇನ್ನಿತರ ಕೆಲಸಗಳಿಗೆ ಅಲೆದಾಡುವಂತಾಗಿದ್ದು, ಈ ಗ್ರಾಮಕ್ಕೆ ಹೋಗಲು ಸಹ ಸಾರಿಗೆ ವ್ಯವಸ್ಥೆ ಸಹ ಇಲ್ಲದಿರುವುದು ಈ ಭಾಗದ ಜನರಿಗೆ ತೊಂದರೆಯಾಗಿದೆ. ಈ ಗ್ರಾಮ ಪಂಚಾಯತ ವ್ಯಾಪ್ತಿಯ ಹಳ್ಳಿಗಳನ್ನು ನೂತನ ಅರಕೇರಾ ತಾಲೂಕಿನಿಂದ ಬೇರ್ಪಡಿಸಿ ಈ ಕೂಡಲೇ ಮೊದಲಿನಂತೆ ದೇವದುರ್ಗ ತಾಲೂಕಿನಲ್ಲಿ ಮುಂದುವರೆಸುವಂತೆ ತಿಳಿಸಿದರು.

ಅಲ್ಲದೇ ರಾಮದುರ್ಗ, ಮಲದಕಲ್, ಗ್ರಾ.ಪಂ ಗಳನ್ನು ದೇವದುರ್ಗಕ್ಕೆ ಸೇರಿಸಲೇಬೇಕೆಂದು ಆಗ್ರಹಿಸಿದರು.

ಈ ಸಂದರ್ಭದಲ್ಲಿ ಮುಖಂಡರಾದ ಸಿದ್ದನಗೌಡ ಮೂಡಲಗುಂಡ, ರಂಗಣ್ಣ ಕೋಲ್ಕರ್, ಅಮರೇಶ, ಶಿವರಾಜ್ ಮುಂಡರಗಿ ರಂಗಣ್ಣ, ಅಮರೇಶಗೌಡ , ಗೋವಿಂದರಾಜು ಸೇರಿದಂತೆ ಇನ್ನಿತರ ಗ್ರಾಮದ ಮುಖಂಡರುಗಳು ಉಪಸ್ಥಿತರಿದ್ದರು.

# ಮೂರನೇ ಪುಟದಿಂದ

## ಡಾ.ಮಹಾಂತ ಶಿವಯೋಗಿಗಳ ಜನ್ಮದಿನ, ವ್ಯಸನಮುಕ್ತ ದಿನಾಚರಣೆ

ಇದೆ ವೇಳೆ ವಿದ್ಯಾರ್ಥಿಗಳಿಗೆ ವ್ಯಸನಮುಕ್ತ ದಿನಾಚರಣೆಯ ಪ್ರತಿಜ್ಞಾವಿಧಿ ಬೋಧಿಸಿದರು.

**ಪ್ರಬಂಧ ಸ್ಪರ್ಧೆ ವಿಜೇತರಿಗೆ ಬಹುಮಾನ:** ವ್ಯಸನಮುಕ್ತ ದಿನಾಚರಣೆ ಅಂಗವಾಗಿ ನಗರದ ಕೆಇಬಿ ಕಾಲೊನಿಯ ಸರ್ಕಾರಿ ಪ್ರೌಢಶಾಲೆಯ ವಿದ್ಯಾರ್ಥಿಗಳಿಗೆ, ಮಾದಕ ವಸ್ತುಗಳಿಂದಾಗುವ ದುಸ್ಪರಿಣಾಮಗಳ ವಿಷಯದ ಬಗ್ಗೆ ಪ್ರಬಂಧ ಸ್ಪರ್ಧೆಯನ್ನು ನಡೆಸಲಾಗಿತ್ತು. ಈ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನ ಪಡೆದ 9ನೇ ತರಗತಿಯ ಪೂಜಾ ತಂದೆ ಗೋಪಿ, ಎರಡನೇ ಸ್ಥಾನ ಪಡೆದ 10ನೇ ತರಗತಿಯ ಅನುರಾಧ ತಂದೆ ವೀರೇಶ ಮತ್ತು ತೃತೀಯ ಸ್ಥಾನ ಪಡೆದ 9ನೇ ತರಗತಿಯ ವೀರೇಶ ತಂದೆ ರವಿನಾಯಕ ಅವರಿಗೆ ಪ್ರಶಸ್ತಿ ಪತ್ರ ನೀಡಿ ಅಭಿನಂದಿಸಲಾಯಿತು.

ಸಮಾರಂಭದಲ್ಲಿ ಜಿಲ್ಲಾ ಉಪ ಆರೋಗ್ಯ ಶಿಕ್ಷಣಾಧಿಕಾರಿ ಬಸಯ್ಯ, ಆರೋಗ್ಯ ಇಲಾಖೆಯ ಅರುಣಕುಮಾರ ಕುಲಕರ್ಣಿ, ಕಾಲೇಜಿನ ಉಪನ್ಯಾಸಕರಾದ ವಿಕ್ರಮಸಿಂಗ್, ಶೇರ್ಲಿ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಎ ಪ್ರಕಾಶ, ಅಬ್ಬಾಸ್‌ಖಾನ್, ಮೊಹಮ್ಮದ್ ಅಜರುಲ್ ಹಕ್, ಲವ ಗೋನವಾರ ಸೇರಿದಂತೆ ಇತರರು ಇದ್ದರು. ಉಪನ್ಯಾಸಕರಾದ ಚಂದ್ರಶೇಖರ ನಿರೂಪಿಸಿದರು. ದೀಪಾ ಎಸ್ ಎಲ್ ಅವರು ಪ್ರಾರ್ಥಿಸಿದರು.

## ಒಳಮೀಸಲಾತಿ ಜಾರಿಗೆ ಒತ್ತಾಯಿಸಿ ಅರೆಬೆತ್ತಲೆ ಪ್ರತಿಭಟನೆ

ಜೆ.ಬಿ. ರಾಜು ಮಾತನಾಡಿ, ಹರಿಯಾಣ, ತೆಲಂಗಾಣ, ಆಂದ್ರಪ್ರದೇಶ ಸರ್ಕಾರಗಳು ಈಗಾಗಲೇ ಒಳ ಮೀಸಲಾತಿ ಜಾರಿಗೊಳಿಸಿದ್ದು, ಕರ್ನಾಟಕ ಸರ್ಕಾಕ್ಕೆ ಏನು ರೋಗವಾಗಿದೆ. ಕೇಳಿದ್ದು ಕೊಡಲಿಲ್ಲ, ಇನ್ನೊಂದು ಆಯೋಗ ತಂದುಕೊಳ್ಳುತ್ತಾರೆ. ಇದು ಮಾದಿಗ ಸಮುದಾಯವನ್ನು ಅಸ್ಥಿತ್ವದಿಂದ ತೆಗೆಯುವ ಪ್ರಯತ್ನವಾಗಿದೆ ಎಂದರು.

ಪ್ರತಿಭಟನೆಯಿಂದ ಸಂಚಾರ ಅಸ್ತವ್ಯಸ್ತ ಪ್ರತಿಭಟನೆಯ ಪರಿಣಾಮವಾಗಿ ಸ್ಟೇಷನ್ ರಸ್ತೆ, ಬಸವೇಶ್ವರ ವೃತ್ತ, ಬಸ್ ನಿಲ್ದಾಣ ಸೇರಿದಂತೆ ಪ್ರಮುಖ ರಸ್ತೆಗಳಲ್ಲಿ ಸಂಚಾರ ದಟ್ಟಣೆ ಉಂಟಾಯಿತು. ಕೆಲ ಕಾಲ ವಾಹನ ಸಂಚಾರ ಸಂಪೂರ್ಣವಾಗಿ ಸ್ಥಗಿತಗೊಂಡಿತ್ತು.

ಪ್ರತಿಭಟನೆಯಲ್ಲಿ ಸಮಾಜದ ಮುಖಂಡರಾದ ರವೀಂದ್ರ ಜಲ್ದಾರ್, ಪಿ.ಎಲ್ಲಪ್ಪ, ಎಸ್.ರಾಜು, ಈರಣ್ಣ ಭಂಡಾರಿ, ಅನೀಲ್ ಕುಮಾರ, ರಂಜಿತ್ ದಂಡೋರಾ, ದುಳ್ಳಯ್ಯ ಗುಂಜಳ್ಳಿ, ಮಾನಪ್ಪ ಮೇಸ್ತ್ರಿ, ನರಸಪ್ಪ ಆಶಾಪೂರ ಸೇರಿದಂತೆ ಇತರರು ಉಪಸ್ಥಿತರಿದ್ದರು.

## ಅತಿದೊಡ್ಡ ರಾಷ್ಟ್ರವಾಗಿ ಹೊರಹೊಮ್ಮಿದ ಭಾರತ!

ಮೂರನೇ ಅತಿದೊಡ್ಡ ಸೌರಶಕ್ತಿ ಉತ್ಪಾದಕ ರಾಷ್ಟ್ರವಾಗುವಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರ ಬೆಂಬಲ, ಪ್ರೋತ್ಸಾಹ, ಮಾರ್ಗದರ್ಶನ ಅತ್ಯಮೂಲ್ಯವಾಗಿದೆ. ಮೋದಿ ಅವರ ದೂರದೃಷ್ಟಿಯಿಂದಾಗಿ ಭಾರತ ಶುದ್ಧ ಇಂಧನ ಕ್ರಾಂತಿಯಲ್ಲಿ ಜಾಗತಿಕವಾಗಿ ಮುಂಚೂಣಿ ಸಾಧಿಸಿದೆ ಎಂದು ಹೇಳಿದರು.

ಪ್ಯಾರಿಸ್ ಒಪ್ಪಂದ ಸಾಧಿಸಿದ ಭಾರತ: ಪ್ಯಾರಿಸ್ ಒಪ್ಪಂದಕ್ಕೆ ಅನುಗುಣವಾಗಿ ಭಾರತ ತನ್ನ ವಿದ್ಯುತ್ ಸಾಮರ್ಥ್ಯದ ಶೇ.50ರಷ್ಟು ಅನ್ನು ಪಳೆಯುಳಿಕೆಯೇತರ ಮೂಲಗಳಿಂದ 5 ವರ್ಷ ಮೊದಲೇ ಸಾಧಿಸಿದೆ. 2030ರ ವೇಳೆಗೆ ಪಳೆಯುಳಿಕೆಯೇತರ ಆಧಾರಿತ ವಿದ್ಯುತ್ ಉತ್ಪಾದನಾ ಸಾಮರ್ಥ್ಯದ ಶೇ.50ಕ್ಕೆ ಹೆಚ್ಚಿಸಲಿದೆ ಎಂದು ತಿಳಿಸಿದರು.

ಭಾರತದ ಇಂಧನ ಸಾಮರ್ಥ್ಯವೀಗ 484.8 GW: ಜೂನ್ 30ರ ಹೊತ್ತಿಗೆ ಭಾರತದ ಒಟ್ಟು ಇಂಧನ ಸಾಮರ್ಥ್ಯ 484.8 ಉಘ ಆಗಿದ್ದು, ಇದರಲ್ಲಿ 242.04 GW (ಶೇ.49.92) ಉಷ್ಣ–ಕಲ್ಲಿದ್ದಲಿನಿಂದ ಹಾಗೂ 8.78 ಉಘ (ಶೇ.1.81) ಪರಮಾಣುವಿನಿಂದ ಮತ್ತು 234.00 ಉಘ (ಶೇ.48.27) ನವೀಕರಿಸಬಹುದಾದ ಮೂಲಗಳಿಂದ ಸಾಧ್ಯವಾಗಿದೆ ಎಂದು ಸಚಿವ ಪ್ರಲ್ಹಾದ ಜೋಶಿ ವಿವರಿಸಿದರು.

ಗ್ಲ್ಯಾಸ್ಗೋದಲ್ಲಿ ನಡೆದ ಅಔಕ26ನಲ್ಲಿ ಭಾರತ ತನ್ನ ಬದ್ಧತೆಗಳನ್ನು ಪೂರೈಸುವ ಹಾದಿಯಲ್ಲಿದೆ. 2030ರ ವೇಳೆಗೆ ಪಳೆಯುಳಿಕೆಯೇತರ ಇಂಧನ ಸಾಮರ್ಥ್ಯವನ್ನು 500 ಉಘಗೆ ಹೆಚ್ಚಿಸಲಿದೆ ಮತ್ತು ನವೀಕರಿಸಬಹುದಾದ ಇಂಧನ ಮೂಲಗಳಿಂದ ಶೇ.50ರಷ್ಟು ಇಂಧನ ಅಗತ್ಯಗಳನ್ನು ಪೂರೈಸಲಿದೆ ಎಂದು ಘೋಷಿಸಿದರು.

## ನೀರಮಾನ್ವಿ ಲೋಕ ಕಲ್ಯಾಣಕ್ಕಾಗಿ ಮಹಾ ಚಂಡಿಕಾ ಹೋಮ



ಜನವಾದಿ ವಾರ್ತೆ

ಮಾನ್ವಿ ಆ 1– ತಾಲೂಕಿನ ನೀರಮಾನ್ವಿ ಗ್ರಾಮದ ಧಾರ್ಮಿಕ ದತ್ತಿ ಇಲಾಖೆಗೆ ಸೇರಿದ ಶ್ರೀ ರೇಣುಕಾ ಯಲ್ಲಮ್ಮ ದೇವಿ ದೇವಸ್ಥಾನದ ಆವರಣದಲ್ಲಿ ಮಳೆ ,ಬೆಳೆ ,ಸಮೃದ್ದಿಗಾಗಿ ಹಾಗೂ ಲೋಕಕಲ್ಯಾಣಕ್ಕಾಗಿ ಮಹಾ ಚಂಡಿಕಾ ಹೋಮ ನಡೆಸಲಾಯಿತು. ನೂರಾರು ಭಕ್ತರು ಹೋಮದಲ್ಲಿ ಭಾಗವಹಿಸಿದರು.

ಉಡುಪಿ ಮೂಲದ ವೇದ ಪಂಡಿತರಾದ ವಾಗೀಷ ಭಟ್ಟ್ ನೇತೃತ್ವದ ಪುರೋಹಿತರ ತಂಡದವರಿಂದ ಚಂಡಿಕಾ ಹೋಮ ವೈಭವದಿಂದ ನಡೆಯಿತು.

ಈ ಸಂದರ್ಭದಲ್ಲಿ ಮುಖಂಡರಾದ ಜಿ.ಗಂಗಣ್ಣ ಸಾಹುಕಾರ್,ಶಿವರಾಜ್ ಸಾಹುಕರ್, ಆರ್.ರಾಘವೇಂದ್ರ ಶೆಟ್ಟಿ, ಗೋಪಾಲ ನಾಯಕ್, ರವಿಕೂಮಾರ ,ಪ್ರವೀಣ್ ಕುಮಾರ್, ನಾಗರಾಜ್, ನರಸಿಂಹ ,ಯಲ್ಲಪ್ಪ,ಶಿವು, ಸೇರಿದಂತೆ ಗ್ರಾಮದ ಸಾವಿರಾರು ಭಕ್ತರು ಭಾಗವಹಿಸಿದರು.

## ನೂತನ ಮುಖ್ಯಾಧಿಕಾರಿ ಸುರೇಶರಿಂದ ಶಾಸಕರಿಗೆ ಸನ್ಮಾನ



ಜನವಾದಿ ವಾರ್ತೆ

ಸಿರವಾರ ಆ 01– ಸ್ಥಳೀಯ ಪಟ್ಟಣ ಪಂಚಾಯತ ನ ನೂತನ ಮುಖ್ಯಾಧಿಕಾರಿಯಾಗಿ ನೇಮಕವಾಗಿರುವ ಸುರೇಶ ಶೆಟ್ಟಿ ಅವರು ಶಾಸಕ ಜಿ.ಹಂಪಯ್ಯ ನಾಯಕ ಅವರನ್ನು ಶುಕ್ರವಾರ ಭೇಟಿ ಮಾಡಿ ಸನ್ಮಾನಿಸಿದರು.

ಈ ಮೊದಲು ಮುಖ್ಯಾಧಿಕಾರಿಯಾಗಿದ್ದ ತಿಮ್ಮಪ್ಪ ಜಗ್ಲಿ ಅವರು ದೇವದುರ್ಗ ಪುರಸಭೆಗೆ ವರ್ಗಾವಣೆಯಾಗಿದ್ದರಿಂದ ಅವರ ಸ್ಥಾನಕ್ಕೆ ಕಾರಟಗಿ ಪುರಸಭೆಯಲ್ಲಿ ಮುಖ್ಯಾಧಿಕಾರಿಯಾಗಿ ಸೇವೆ ಸಲ್ಲಿಸುತ್ತಿದ್ದ ಸುರೇಶ ಶೆಟ್ಟಿ ಅವರನ್ನು ಸಿರವಾರ ಪಟ್ಟಣ ಪಂಚಾಯತಿಗೆ ವರ್ಗಾವಣೆ ಮಾಡಿ ನಗರಾಭಿವೃದ್ಧಿ ಇಲಾಖೆಯ ಅಧೀನ ಕಾರ್ಯದರ್ಶಿ ಮಹಾಂತಪ್ಪ ಎಸ್ ಅವರು ಆದೇಶ ಹೊರಡಿಸಿದ್ದಾರೆ.

## ಸರ್ಕಾರ ರೈತರ ಸಮಸ್ಯೆಗೆ ಸ್ಪಂದಿಸದಿದ್ದರೆ ರಾಜ್ಯಾದ್ಯಂತ ಹೋರಾಟ: ಚಾಮರಸ ಪಾಟೀಲ್

ಜನವಾದಿ ವಾರ್ತೆ

ಲಿಂಗಸುಗೂರು ಆ 1– ಮುಂಗಾರು ಬಿತ್ತನೆ ಮಾಡುವುದಕ್ಕೂ ಪೂರ್ವದಲ್ಲಿ ರಸಗೊಬ್ಬರದ ಕೊರತೆ ಇಲ್ಲ ಎಂದು ಕೃಷಿ ಇಲಾಖೆ ಸಾರಿ ಸಾರಿ ಹೇಳಿತ್ತು. ಆದರೆ ಬಿತ್ತನೆ ಬಳಿಕ ವರಸೆ ಬದಲಿಸಿದ ಇಲಾಖೆ ಗೊಬ್ಬರ ಕೊರತೆ ಇದೆ ಎನ್ನುವುದು ಖಂಡನೀಯ , ಸರ್ಕಾರ ಕೂಡಲೇ ರೈತರ ಸಮಸ್ಯೆಗೆ ಸ್ಪಂದಿಸಲಿ ಎಂದು ಕರ್ನಾಟಕ ರೈತ ಸಂಘದ ರಾಜ್ಯ ಗೌರವಾಧ್ಯಕ್ಷ ಚಾಮರಸ ಪಾಟೀಲ್ ಹೇಳಿದರು.



ಅವರಿಂದು ಪಟ್ಟಣದ ಪತ್ರಿಕಾ ಭವನದಲ್ಲಿ ಸುದ್ದಿಗೋಷ್ಠಿ ನಡೆಸಿ ಮಾತನಾಡಿದವರು ಕೃಷಿ ಇಲಾಖೆ ರೈತರಿಗೆ ರಸಗೊಬ್ಬರ ಸಮರ್ಪಕವಾಗಿ ವಿತರಣೆ ಮಾಡುವಲ್ಲಿ ಸಂಪೂರ್ಣವಾಗಿ ವಿಫಲವಾಗಿದೆ. ರೈತರ ಹಿತಕಾಯಲು ಸರಕಾರ ನ್ಯಾಯಬೆಲೆ ಅಂಗಡಿಗಳಲ್ಲಿ ಪಡಿತರ ಧಾನ್ಯ ವಿತರಣೆ ಮಾಡುವಂತೆ, ರಸಗೊಬ್ಬರವನ್ನೂ ವಿತರಣೆ ಮಾಡಲಿ, ರೈತರಿಗೆ ನೆರವಾಗದ ಸರಕಾರ ಯಾಕೆ ನಡೆಸುತ್ತೀರಿ? ರಾಜ್ಯದ ಪ್ರತಿ ರೈತರ ಮಾಹಿತಿಯೂ ಸರಕಾರದ ಬಳಿ ಇದೆ. ಪಡಿತರ ಧಾನ್ಯ ವಿತರಣೆ ರೀತಿ, ಬಿತ್ತನೆ ಬಳಿಕ ಎಕರೆವಾರು ಡಿಐಪಿ, ಯೂರಿಯಾ, ಕಾಂಪ್ಲೆಕ್ಸ್ ರಸಗೊಬ್ಬರ ಎಷ್ಟೆಷ್ಟು ಬೇಕು ಎನ್ನುವುದನ್ನು ಅರಿತು. ಅಷ್ಟು ಪ್ರಮಾಣದಲ್ಲಿ ರೈತರಿಗೆ ನೇರವಾಗಿ ವಿತರಣೆ ಮಾಡುವ ಕೆಲಸಕ್ಕೆ ಸರಕಾರ ಮುಂದಾಗಬೇಕು ಎಂದರು.

ಕೂಡಲೇ ಸರಕಾರ ನೆಪ ಹೇಳದೇ, ಪರ್ಯಾಯ ವ್ಯವಸ್ಥೆಗೆ ಮುಂದಾಗಬೇಕು.

ಅಧಿಕಾರಿಗಳ ಬೇಜವಾಬ್ದಾ–ರಿತನದಿಂದ ರೈತರು ದಿಕ್ಕು ತೋಚದಂತೆ ಆಗಿದ್ದಾರೆ. ರಸಗೊಬ್ಬರ ಕೊರತೆ ನಿವಾರಣೆಗೆ ಸರಕಾರ ಮುಂದಾಗಬೇಕು ಶೀಘ್ರವೇ ರೈತರ ಸಮಸ್ಯೆ ಪರಿಹ–ರಿಸದಿದ್ದರೆ ರಾಜ್ಯದ್ಯಂತ ರೈತರು ಹೋರಾಟ ಮಾಡಬೇಕಗುತ್ತದೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ರೈತ ಮುಖಂಡರಾದ ಬಸನಗೌಡ ಬಲ್ಲಟಗಿ, ಪ್ರಭಾಕರ ಪಾಟೀಲ್, ಹನುಮಗೌಡ ಜಾಲಹಳ್ಳಿ, ಸುಗೂರಯ್ಯಸ್ವಾಮಿ, ನಾಗವೇಣಿ, ಮಲ್ಲನಗೌಡ ಸೇರಿದಂತೆ ಇತರರು ಉಪಸ್ಥಿತರಿದ್ದರು.

## ಆಗಸ್ಟ್ 3 ರಂದು ಹಿಂದೂ ರೆಡ್ಡಿ ಸಮುದಾಯದ ಜಾಗೃತ ಸಭೆ



ಜನವಾದಿ ವಾರ್ತೆ

ರಾಯಚೂರು ಆ 1– ಪರಮಪೂಜ್ಯ ಶ್ರೀ ಮೇಮನಾನಂದ ಮಹಾಸ್ವಾಮಿಗಳು , ರೆಡ್ಡಿ ಗುರುಪೀಠದ ಪೀಠಾಧಿಪತಿಗಳುಬ ಹರಿಹರ ಇವರ ಸಾನಿಧ್ಯದಲ್ಲಿ ಆಗಸ್ಟ್ 3 ರಂದು ಬೆಳಿಗ್ಗೆ 10 ಗಂಟೆಗೆ ನಗರದ ಆಶಾಪೂರ ರಸ್ತೆಯಲ್ಲಿರುವ ಕೆ.ಕೆ.ರೆಡ್ಡಿ ಕಲ್ಯಾಣ ಮಂಟಪದಲ್ಲಿ ಜಿಲ್ಲಾ ಮಟ್ಟದ ಹಿಂದೂ ರೆಡ್ಡಿ ಸಮುದಾಯದ ಜಾಗೃತಿ ಸಭೆಯನ್ನು ಹಮ್ಮಿಕೊಳ್ಳಲಾಗಿದ್ದು, ಈ ಹಿನ್ನೆಲೆಯಲ್ಲಿ ಜಿಲ್ಲೆಯ ಸಮಸ್ತ ರೆಡ್ಡಿ ಸಮಾಜದ ಎಲ್ಲಾ ಒಳಪಂಗಡಗಳ ರೆಡ್ಡಿ ಬಂಧುಗಳು ಈ ಸಭೆಯಲ್ಲಿ ಭಾಗವಹಿಸಿ ಸಂಘಟನೆಯ ಕುರಿತಂತೆ ಚರ್ಚಿಸಬೇಕೆಂದು ತಾಲೂಕು ರೆಡ್ಡಿ ಕ್ಷೇಮಾಭಿವೃದ್ಧಿ ಸಂಘದ ಸಹ ಕಾರ್ಯದರ್ಶಿಗಳಾದ ವಿ.ಪಿ.ರೆಡ್ಡಿಯವರು ಪತ್ರಿಕಾ ಪ್ರಕಣನೆ ಮೂಲಕ ತಿಳಿಸಿದರು.

## ಕವಿತಾಳ: ಕ್ರೀಡಾಂಗಣ ಸ್ಥಳ, ಮೊರಾರ್ಜಿ ದೇಸಾಯಿ ವಸತಿ ಶಾಲೆಗೆ ತಹಸೀಲ್ದಾರ್ ಭೇಟಿ, ಪರಿಶೀಲನೆ



ಜನವಾದಿ ವಾರ್ತೆ

ಕವಿತಾಳ ಆ 1– ಪಟ್ಟಣದ ಹೊರ ವಲಯದಲ್ಲಿರುವ ಕ್ರೀಡಾಂಗಣ ಜಾಗ, ಮೊರಾರ್ಜಿ ದೇಸಾಯಿ ವಸತಿ ಶಾಲೆ ಮತ್ತು ಸರ್ವೇ ನಂಬರ್ 651ರ ಸರಕಾರಿ ಜಮೀನುಗಳಿಗೆ ಸಿರವಾರ ತಹಸೀಲ್ದಾರ ಅಶೋಕ ಪವಾರ್ ರವರು ಭೇಟಿ ನೀಡಿ ಪರಿಶೀಲಿಸಿದರು.

ಮೊರಾರ್ಜಿ ದೇಸಾಯಿ ವಸತಿ ಶಾಲೆಯ ಮಕ್ಕಳ ಜೊತೆ ಸಂವಾದ ನಡೆಸಿ ಮಕ್ಕಳೊಂದಿಗೆ ವಿವಿಧ ವಿಷಯಗಳ ಬಗ್ಗೆ ಚರ್ಚಿಸಿದರು. ಗುಣಮಟ್ಟದ ಉಪಹಾರ,ಊಟ, ಸಮಯಕ್ಕೆ ಸರಿಯಾಗಿ ವಿತರಣೆ ಮಾಡುವ ಬಗ್ಗೆ ವಿದ್ಯಾರ್ಥಿಗಳಿಗೆ ಕೇಳಿದರು. ಶಾಲೆಯಲ್ಲಿರುವ ಕುಂದು ಕೊರೆತಗಳ ಬಗ್ಗೆ ಮುಖ್ಯೋಪಾಧ್ಯಾಯರಾದ ಅಂದಪ್ಪ ಅವರಿಂದ ಮಾಹಿತಿ ಪಡೆದ ಅವರು ವಿದ್ಯಾರ್ಥಿಗಳಿಗೆ ಗುಣಮಟ್ಟದ ಶಿಕ್ಷಣವನ್ನು ಕೊಡಬೇಕು ಎಂದು ಶಿಕ್ಷಕರಿಗೆ ಸಲಹೆ ನೀಡಿದರು.

ನಂತರ ಕ್ರೀಡಾಂಗಣ ಜಾಗಕ್ಕೆ ಭೇಟಿ ನೀಡಿದ ತಹಶೀಲ್ದಾರರು ಅರಣ್ಯ ಇಲಾಖೆ ಅಧಿಕಾರಿಗಳ ಜೊತೆ ಮಾತನಾಡಿ ಕಾನೂನು ತೊಡಕುಗಳನ್ನ ಸರಿಪಡಿಸಿ ಕಾಮಗಾರಿಯನ್ನು ಆದಷ್ಟು ಬೇಗನೆ ಪ್ರಾರಂಭ ಮಾಡಲಾಗುವುದು ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಉಪ ತಹಶೀಲ್ದಾರ ಮಂಜುನಾಥ, ಗ್ರಾಮ ಆಡಳಿತಧಿಕಾರಿ ಚಾಮುಂಡೇಶ್ವರಿ, ಶಿಕ್ಷಕರಾದ ದುರುಗಪ್ಪ, ಹನುಮಂತಪ್ಪ, ಸಲೀಮ್, ವಿರೇಶ, ನಾಗರಾಜ, ಶಿವಗ್ಯಾನಪ್ಪ, ಬಸವರಾಜ ಮತ್ತು ಖಾಜಾ ಪಾಷಾ ಉಪಸ್ಥಿತರಿದ್ದರು.

## ಜಿಲ್ಲೆಯ ಜ್ವಲಂತ ಸಮಸ್ಯೆಗಳ ಪರಿಹಾರಕ್ಕೆ ಆಗ್ರಹಿಸಿ ಹಟ್ಟಿ ಚಲೋ: ಆರ್. ಮಾನಸಯ್ಯ



ಜನವಾದಿ ವಾರ್ತೆ

ಲಿಂಗಸೂಗೂರು ಆ 1– ಜಿಲ್ಲೆಯ ಜ್ವಲಂತ ಸಮಸ್ಯೆಗಳ ಪರಿಹಾರಕ್ಕೆ ಸಿಎಂ ಸಿದ್ದರಾಮಯ್ಯ ಅವರನ್ನು ಸಿಂಧನೂರು ಮತ್ತು ರಾಯಚೂರಿಗೆ ಬಂದಾಗ ಭೇಟಿ ಮಾಡಿ ಮನವಿ ಮಾಡಿದ್ದೇವೆ. ಆದರೆ, ಪರಿಹಾರ ಹಾಗೂ ಸ್ಪಂದನೆ ಮಾತ್ರ ಸಿಕ್ಕಿರುವುದಿಲ್ಲ. ಹಾಗಾಗಿ, ಆಗಸ್ಟ್ 6 ರಂದು ಹಟ್ಟಿ ಚಿನ್ನದ ಗಣಿಗೆ ಬರುತ್ತಿರುವ ಸಿಎಂ ಸಿದ್ದರಾಮಯ್ಯ ಅವರನ್ನು ಅಡ್ಡಗಟ್ಟಿ ಆಗ್ರಹಿಸಲು ಹಟ್ಟಿಚಲೋ ಹೋರಾಟಕ್ಕೆ ಕರೆ ನೀಡಲಾಗಿದೆ ಎಂದು ಸಿಪಿಐ (ಎಂಎಲ್ )ರೆಡ್ ಸ್ಟಾರ್ ಪೊಲಿಟಿ ಬ್ಯೂರೋ ಸದಸ್ಯ ಅರ್. ಮಾನಸಯ್ಯ ಹೇಳಿದರು.

ತುಂಗಭದ್ರ ಕಾರ್ಮಿಕರಿಗೆ ಕಳೆದ 7 ತಿಂಗಳ ಬಾಕಿ ವೇತನ ಪಾವತಿ,ಜವಳಗೇರಾ 1064 ಎಕರೆ ಹೆಚ್ಚುವರಿ ಭೂಮಿಯನ್ನು, ಭೂ ರಹಿತರಿಗೆ ಹಂಚಲೇಬೇಕು, ಹಟ್ಟಿ ಚಿನ್ನದ ಗಣಿಯ ಆಪತ್ಕಾಲದ 985.5 ಕೋಟಿ ಮೀಸಲು ನಿಧಿಯನ್ನು ಹೊಸ ಚಿನ್ನದ ಗಣಿ ಆರಂಭಿಸಿ ಸಾವಿರಾರು ನಿರುದ್ಯೋಗಿಗಳಿಗೆ ಉದ್ಯೋಗ ಅವಕಾಶ, ಸೇರಿದಂತೆ ಅನೇಕ ಒತ್ತಾಯಗಳು ಮುಖ್ಯಮಂತ್ರಿ ಅವರಿಗೆ ಸಿಂಧನೂರು ಮತ್ತು ರಾಯಚೂರು ಬೇಟಿ ಸಂದರ್ಭದಲ್ಲಿ ಮನವಿ ಪತ್ರ ನೀಡಿದ್ದೇವೆ. ಆದರೆ, ಇದುವರೆಗೂ ಈ ಸಮಸ್ಯೆಗಳ ಪರಿಹಾರಕ್ಕೆ ಸರಕಾರದಿಂದ/ಮುಖ್ಯಮಂತ್ರಿಗಳ ಕಾರ್ಯಾಲಯದಿಂದ ಅಥವಾ ಜಿಲ್ಲಾ ಉಸ್ತುವಾರಿ ಮಂತ್ರಿಗಳಿಂದ ಯಾವುದೇ ಕನಿಷ್ಠ ಸ್ಪಂದನೆ ಸಿಕ್ಕಿರುವುದಿಲ್ಲ. ನಮ್ಮ ಬೇಡಿಕೆಗಳ ಹಿಡೇರಿಕೆಗೆ ಆಗಸ್ಟ್ 6 ರಂದು ಹಟ್ಟಿ ಚಿನ್ನದ ಗಣಿಗೆ ಬರುವ ಸಿಎಂ ಸಿದ್ದರಾಮಯ್ಯ ಅವರನ್ನು ಅಡ್ಡಗಟ್ಟಿ ಆಗ್ರಹಿಸಲು ಸಾವಿರ ಸಂಖ್ಯೆಯಲ್ಲಿ ಕಾರ್ಮಿಕರು, ರೈತರು, ಯುವಕರು, ಭೂರಹಿತ ಸಾಗುವಳಿದಾರರು ಹಟ್ಟಿಗೆ ಬರಬೇಕೆಂದು ಪತ್ರಿಕಾಗೋಷ್ಠಿಯ ಮೂಲಕ ಕರೆ ನೀಡಿದರು.

ಈ ಸಂಧರ್ಭದಲ್ಲಿ ಆದ–'ೀಶ ಹಿರೇನಗನೂರ, ಬಸವರಾಜ ಬಡಿಗೇರ್, ಗಂಗಾಧರ ಗುಂತಗೋಳ, ಚಿದಾನಂದ, ನಿಸರ್ಗ ಇದ್ದರು.

## ಆಗಸ್ಟ್ 3 ರಂದು ಎ.ಪಿ.ಜೆ ಅಬ್ದುಲ್ ಕಲಾಂ ಸೇವಾ ಸಂಸ್ಥೆಯಿಂದ ಪ್ರಶಸ್ತಿ ಪ್ರದಾನ ಸಮಾರಂಭ : ನರಸಿಂಹಲು



ಜನವಾದಿ ವಾರ್ತೆ

ರಾಯಚೂರು ಆ 1– ಡಾ.ಎ.ಪಿ.ಜೆ ಅಬ್ದುಲ್ ಕಲಾಂ ಸಮಾಜ ಸೇವಾ ಸಂಸ್ಥೆ ಯಾಪಲದನ್ನಿ ವತಿಯಿಂದ ಆಗಸ್ಟ್ 3 ರಂದು ಬೆಳಿಗ್ಗೆ 10:30 ಕ್ಕೆ ನಗರದ ಪಂಡಿತ ಸಿದ್ಧರಾಮ ಜಂಬಲದಿನ್ನಿ ರಂಗಮಂದಿರಲ್ಲಿ ವಾರ್ಷಿಕ ಪ್ರಶಸ್ತಿ ಪ್ರಧಾನ ಹಾಗೂ 14 ನೇ ವಾರ್ಷಿಕೋತ್ಸವ ಸಮಾರಂಭವನ್ನು ಹಮ್ಮಿಕೊಳ್ಳಲಾಗಿದೆ ಎಂದು ಸಂಸ್ಥೆಯ ಕಾರ್ಯದರ್ಶಿಯಾದ ನರಸಿಂಹಲುರವರು ತಿಳಿಸಿದರು.

ಅವರಿಂದು ನಗರದ ಪತ್ರಿಕಾ ಭವನದಲ್ಲಿ ಸುದ್ದಿಗೋಷ್ಠಿಯನ್ನು ಉದ್ದೇಶಿಸಿ ಮಾತನಾಡಿದವರು ಈ ಕಾರ್ಯಕ್ರಮದ ದಿವ್ಯ ಸಾನಿಧ್ಯವನ್ನು ಶಾಂತಮಲ್ಲ ಶಿವಾಚಾರ್ಯ ಮಹಾಸ್ವಾಮಿಗಳು, ರಾಜಯೋಗಿನಿ ಸ್ಮಿತಾ ಅಕ್ಕನವರು ವಹಿಸಿಕೊಳ್ಳಲಿದ್ದು, ಉದ್ಘಾಟನೆಯನ್ನು ಸಚಿವರಾದ ಎನ್.ಎಸ್.ಬೋಸರಾಜು, ಮಹಾಪೌರರಾದ ಸಾಜೀದ್ ಸಮೀರ್ ರವರು ನೆರವೇರಿಸಲಿದ್ದು, ಮುಖ್ಯ ಅತಿಥಿಗಳಾಗಿ ಉಮೇಶ್ ಕಾಂಬ್ಳೆ , ಡಾ.ನಂದಿತಾ ಎಂ.ಎನ್ , ರಮಾಕಾಂತ ಎ.ಎಸ್. ರಾಜಶೇಖರಪ್ಪ ಸಾಹುಕಾರ, ಕೆ.ಲಕ್ಷ್ಮೀಕಾಂತರೆಡ್ಡಿ, ರವಿಕುಮಾರ್ ಗೋನಾಳ್ ರವರು ವಹಿಸಲಿದ್ದು, ಅಧ್ಯಕ್ಷತೆಯನ್ನು ವಿಶ್ವನಾಥರೆಡ್ಡಿರವರು ವಹಿಸಿಕೊಳ್ಳಲಿದ್ದು ಹಲವು ಸಾಧಕರಿಗೆ ಪ್ರಶಸ್ತಿ ಪ್ರಧಾನವನ್ನು ಮಾಡಲಾಗುವುದು ಈಗಾಗಿ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಕಾರ್ಯಕ್ರಮ ಯಶಸ್ವಿಗೊಳಿಸಬೇಕೆಂದು ಕೋರಿದರು.

ಈ ಸಂದರ್ಭದಲ್ಲಿ ಸಂಸ್ಥೆಯ ಅಧ್ಯಕ್ಷರಾದ ವಿಶ್ವನಾಥರೆಡ್ಡಿ, ನರಸಪ್ಪ ಎಲೆಬಿಚ್ಚಾಲಿ, ಮನ್ಸೂರು ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

## ದಿ.ವಿಜಯ್ ರೆಡ್ಡಿ ನಾಲ್ಕನೇ ಪುಣ್ಯಸ್ಮರಣೆ ಅಂಗವಾಗಿ ರಕ್ತದಾನ ಶಿಬಿರ

ಜನವಾದಿ ವಾರ್ತೆ

ರಾಯಚೂರು ಆ 1– ಪ್ರತಿಭಾವಂತ ಕ್ರೀಡಾಪಟುವಾಗಿದ್ದ ವಿಜಯರೆಡ್ಡಿ ಅಗಲಿ ನಾಲ್ಕು ವರ್ಷ ಸಂದಿದ್ದು ಪ್ರತಿವರ್ಷದಂತೆ ಈ ವರ್ಷವೂ ಆಗಸ್ಟ್ 3 , ಬೆಳಿಗ್ಗೆ 9:30 ಕ್ಕೆ ಎಸ್.ಸಿ.ಎ.ಬಿ ಕಾನೂನು ಮಹಾವಿದ್ಯಾಲಯದ ಮೈದಾನದಲ್ಲಿ ರಕ್ತದಾನ ಶಿಬಿರವನ್ನು ಹಮ್ಮಿಕೊಳ್ಳಲಾಗಿದೆ ಎಂದು ಸಿಟಿ ಇಲೆವನ್ ಕ್ಲಬ್ ಮುಖ್ಯ ತರಬೇತುದಾರರಾದ ಎಮ್.ವಿಜ–ಕುಮಾರ್ ತಿಳಿಸಿದರು.

ಅವರಿಂದು ನಗರದ ಪತ್ರಿಕಾ ಭವನದಲ್ಲಿ ಸುದ್ದಿಗೋಷ್ಠಿಯನ್ನು ಉದ್ದೇಶಿಸಿ ಮಾತನಾಡಿದವರು ವಿಜಯ್ ರೆಡ್ಡಿ ಪ್ರತಿಭಾವಂತ ಆಟಗಾರ ಆಗಿದ್ದ ಆದರೆ ಅಕಾಲಿಕವಾಗಿ ನಮ್ಮನ್ನು ಅಗಲಿದ್ದು ಅವರ ಪುಣ್ಯಸ್ಮರಣೆ ಅಂಗವಾಗಿ ಸಿಟಿ ಇಲೆವನ್ ಕ್ಲಬ್ , ಎಸ್.ಸಿ.ಎ.ಬಿ ಕಾನೂನು ಮಹಾವಿದ್ಯಾಲಯ , ವೀರಸಾರ್ವರ್ಕರ್ ಯೂಥ್ ಅಸೋಸಿಯೇಷನ್ , ಭಾರತೀಯ ರೆಡ್ ಕ್ರಾಸ್ ಸಂಸ್ಥೆ ವತಿಯಿಂದ ರಕ್ತದಾನ ಶಿಬಿರವನ್ನು ಹಮ್ಮಿಕೊಳ್ಳಲಾಗಿದ್ದು ಇದರ ಮುಖ್ಯ ಅತಿಥಿಗಳಾಗಿ ಮಹಾಪೌರರಾದ ಸಾಜೀದ್ ಸಮೀರ್ , ಪವನ್ ಕುಮಾರ ಸುಖಾಣಿ , ಎನ್.ಶಂಕ್ರಪ್ಪ , ರವಿ ಬೋಸರಾಜು , ಅಂಬಾಪತಿ ಪಾಟೀಲ್ , ವಿಜಯಕುಮಾರ್ ವಕೀಲರು , ನಂದಾಪುರ ಶ್ರೀನಿವಾಸ , ಮೃತ್ಯುಂಜಯ ದ್ಯಾಸನೂರ್ , ಅಮಿತ್ ಲೋಡಾ , ಪದ್ಮಾ ಜೆ , ಭಾಗವಹಿಸಲಿದ್ದು ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶರಣರೆಡ್ಡಿಯವರು ವಹಿಸಿಕೊಳ್ಳಲಿದ್ದಾರೆ ಈಗಾಗಿ ಹೆಚ್ಚಿನ ಸಂಖ್ಯೆಯಲ್ಲಿ ಕ್ರೀಡಾಸಕ್ತರು ಆಗಮಿಸಬೇಕೆಂದು ಕೋರಿದರು.

ಅಲ್ಲದೇ ಈ ವರ್ಷ ಸಿಟಿ ಇಲೆವನ್ ಕ್ಲಬ್ ವತಿಯಿಂದ ಮಹಾರಾಜ ಟ್ರೋಫಿಗೆ ವಿಧ್ಯಾಧರ್ ಪಾಟೀಲ್ , ಮರಿಬಸವ , ತಿಪ್ಪಾರೆಡ್ಡಿ , ವಿಜಯರಾಜ್ , ನಿರಂಜನ್ ನಾಯಕ್ ಆಯ್ಕೆಗೊಂಡಿದ್ದು ನಮ್ಮ ಜಿಲ್ಲೆಗೆ ಕೀರ್ತಿಯನ್ನು ತಂದಿದೆ ಎಂದು ಹರ್ಷವ್ಯಕ್ತಪಡಿಸಿದರು.

ಈ ಸಂದರ್ಭದಲ್ಲಿ ವೆಂಕಟರೆಡ್ಡಿ , ಸಂಜೀವಕುಮಾರ್ ,ರವಿಕುಮಾರ್ , ಭರತಕುಮಾರ ರೆಡ್ಡಿ , ಅತಾವುಲ್ಲಾ ಸೇರಿದಂತೆ ಇನ್ನಿತರರು ಉಪಸ್ಥಿತ–ರಿದ್ದರು .

## ಕುಡಿಯುವ ನೀರಿಗಾಗಿ ಪಾದಯಾತ್ರೆ – ನಯೀಮ್




ಜನವಾದಿ ವಾರ್ತೆ

ಮುದಗಲ್ ಆ 1– ಶಾಶ್ವತ ಕುಡಿಯುವ ನೀರಿಗಾಗಿ ಹಾಗೂ ಮುದಗಲ್ ಪಟ್ಟಣವನ್ನು ತಾಲೂಕ ಕೇಂದ್ರವನ್ನಾಗಿ ಮಾಡುವ ಸಲುವಾಗಿ ಪಟ್ಟಣದಿಂದ ಹಟ್ಟಿಚಿನ್ನದಗಣಿ ಪಟ್ಟಣದ ವರಗೆ ಕರ್ನಾಟಕ ರಕ್ಷಣಾ ವೇದಿಕೆ ಸ್ವಾಭಿಮಾನ ಸೇನೆ ಸಂಘಟನೆ ವತಿಯಿಂದ ಪಾದಯಾತ್ರೆ ಮಾಡಲಾಗುವದು ಎಂದು ಅಧ್ಯಕ್ಷ ಎಸ್ ಎ ನಯಿಂ ಹೇಳಿದರು.

ಪಟ್ಟಣದ ಪತ್ರಿಕೆ ಭವನದಲ್ಲಿ ಸುದ್ದಿಗೋಷ್ಠಿ ಉದ್ದೇಶಿಸಿ ಮಾತನಾಡಿ ಅವರು ಸುಮಾರು 18 ವರ್ಷಗಳಿಂದ ಸಂಘಟನೆ ಮೂಲಕ ಐತಿಹಾಸಿಕ ಮುದಗಲ್ ಪಟ್ಟಣ ತಾಲೂಕನ್ನಾಗಿ ಘೋಷಣೆ ಮಾಡುವಂತೆ. ಹಾಗೂ ಶಾಶ್ವತ ಕುಡಿಯುವ ನೀರಿಗಾಗಿ ಹೋರಾಟ ಮಾಡಿದ್ದೇವೆ ಹಾಗೂ ಮೇ 13 ರಂದು ಮುದಗಲ್ ಪಟ್ಟಣವನ್ನು ಕೂಡ ಸಂಪೂರ್ಣ ಬಂದ್ ಮಾಡಲಾಗಿತ್ತು. ಆದರೆ ಇದುವರೆಗೂ ಯಾವುದೇ ಸಮಸ್ಯೆಗಳಿಗೆ ಸ್ಪಂದಿಸಿರುವುದಿಲ್ಲ ಆಗಸ್ಟ್ 6 ರಂದು ಹಟ್ಟಿ ಪಟ್ಟಣಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ರವರು ಆಗಮಿಸುತ್ತಿರುವುದುರಿಂದ ಹಟ್ಟಿಚಿನ್ನದಗಣಿ ಪಟ್ಟಣದ ವರಗೆ ಪಾದಯಾತ್ರೆ ಮಾಡಿ ಮನವಿ ಪತ್ರ ಸಲ್ಲಿಸಲಾಗುವದು ಈ ಪಾದಯಾತ್ರೆಯಲ್ಲಿ ಮುದಗಲ್ ಪಟ್ಟಣದ ವಿವಿಧ ಸಂಘಟನೆಗಳು ಹಾಗೂ ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಯಶಸ್ವಿಗೊಳಿಸಬೇಕೆಂದರು

ಈ ಸಂದರ್ಭದಲ್ಲಿ ಸಂತೋಷಕುಮಾರ್, ಸಾಬು ಹುಸೇನ್, ಎಸ್ ಎನ್ ಖಾದ್ರಿ, ಭೀಮಣ್ಣ ಉಪ್ಪಾರ, ಅಬ್ದುಲ್ ಮಜೀದ್, ಮಹಾಂತೇಶ ಚಟ್ಟರ್ ಸೇರಿದಂತೆ ಇನ್ನಿತರರು ಇದ್ದರು.

## ಹುತಾತ್ಮ ವೀರಯೋಧ ಮಂಜುನಾಥ .ಎ ರವರ ಪುತ್ಥಳಿ ಸ್ಥಳಾಂತರಕ್ಕೆ ಮನವಿ

ಜನವಾದಿ ವಾರ್ತೆ

ಮಾನಿ ಆ 1– ಪಟ್ಟಣದ ತಹಶೀಲ್ದಾರ ಕಚೇರಿಯಲ್ಲಿ ಕೇಂದ್ರಿಯ ಸಶಸ್ತ್ರ ಪೊಲೀಸ್ ಪಡೆಗಳ ಮಾಜಿ ಯೋಧರ ಕ್ಷೇಮಾಭಿವೃದ್ದಿ ಸಂಘದ ತಾ.ಘಟಕದ ವತಿಯಿಂದ ತಹಶೀಲ್ದಾರ ಭೀಮರಾಯ ರಾಮಸಮುದ್ರರವ–ರಿಗೆ ತಾ.ಅಧ್ಯಕ್ಷರಾದ ಕೃಷ್ಣಮೂರ್ತಿ ಮನವಿ ಸಲ್ಲಿಸಿ ಮಾತನಾಡಿ ಪಟ್ಟಣದ ರಾಯಚೂರು ರಸ್ತೆಯಲ್ಲಿನ ಹುತಾತ್ಮ ವೀರಯೋಧ ಮಂಜುನಾಥ .ಎ ರವರ ಪುತ್ಥಳಿಗೆ ರಸ್ತೆ ನಿರ್ಮಾಣ ಕಾಮಗಾರಿಯಿಂದಾಗಿ ಹಾನಿಯಾಗುವ ಸಂಭವವಿರುವುದರಿಂದ ಸುರಕ್ಷಿತವಾದ ಸೂಕ್ತವಾದ ಸ್ಥಳಕ್ಕೆ ಪುತ್ಥಳಿಯನ್ನು ಸ್ಥಳಾಂತರಿಸುವಂತೆ ಕೋರಿದರು.



ಈ ಸಂದರ್ಭದಲ್ಲಿ ತಾ.ಪ್ರ. ಕಾರ್ಯದರ್ಶಿ ಜೆ.ಆಂಜನೇಯ್ಯ, ಬಸವರಾಜ ಮುಸ್ಟೂರು, ಸೇರಿದಂತೆ ಇನ್ನಿತರ ಮಾಜಿ ಯೋಧರು ಉಪಸ್ಥಿತರಿದ್ದರು.

## ಅಂಗಡಿಗಳಿಗೆ ಅಧಿಕಾರಿಗಳ ತಂಡ ಭೇಟಿ

ಜನವಾದಿ ವಾರ್ತೆ

ಮುದಗಲ್ ಆ 1– ಪಟ್ಟಣದ ರಸಗೊಬ್ಬರ ಮಾರಾಟ ಮಾಡುತ್ತಿರುವ ಅಂಗಡಿಗಳಿಗೆ ಶುಕ್ರವಾರ ಅಧಿಕಾರಿಗಳ ತಂಡ ಭೇಟಿ ನೀಡಿ ಪರಿಶೀಲನೆ ಮಾಡಿದರು.



ರೈತರಿಗೆ ಹೆಚ್ಚಿನ ದರದಲ್ಲಿ ರಸಗೊಬ್ಬರ ಮಾರಾಟ ಮಾಡುತ್ತಿದ್ದಾರೆ ಎಂದು ದೂರು ಕೇಳಿ ಬಂದಿರುವ ಹಿನ್ನಲೆಯಲ್ಲಿ ಸ್ಥಳೀಯ ಪೊಲೀಸ್ ಠಾಣೆ ಪಿಎಸ್ಐ ವೆಂಕಟೇಶ ಮಾಡಗೇರಿ, ಹಾಗೂ ರೈತ ಸಂಪರ್ಕ ಕೇಂದ್ರದ ಕೃಷಿ ಅಧಿಕಾರಿ ಮಾಂತಯ್ಯ ಹಿರೇಮಠ ಪಟ್ಟಣದ ರಸಗೊಬ್ಬರ ಮಾರಾಟ ಮಾಡುತ್ತಿರುವ ಎಲ್ಲಾ ಅಂಗಡಿಗಳಿಗೆ ಭೇಟಿ ನೀಡಿ ಪರಿಶೀಲನೆ ಮಾಡಿ ರಸಗೊಬ್ಬರ ದಾಸ್ತಾನು ಕುರಿತು ಮಾಹಿತಿ ಪಡೆದುಕೊಂಡು ಸರ್ಕಾರ ನಿಗದಿಪಡಿಸಿದ ದರದಲ್ಲಿ ರೈತರಿಗೆ ರಸಗೊಬ್ಬರ ನೀಡಬೇಕೆಂದು ಅಂಗಡಿಗಳ ಮಾಲೀಕರಿಗೆ ಸೂಚಿಸಿದರು

ಈ ಸಂದರ್ಭದಲ್ಲಿ ಪೊಲೀಸ್ ಸಿಬ್ಬಂದಿ ಅನಿಲಕುಮಾರ ಹಾಗೂ ರೈತ ಸಂಪರ್ಕ ಕೇಂದ್ರದ ಸಿಬ್ಬಂದಿ ಮೈಬೂಬಸಾಬ ಇದ್ದರು.

Printed by , Published by, Owned by : basavaraj H , Printed and Published at Basavashree Printers and Publishers, H.No.1-11-54/32, Prashanth Colony, RAICHUR-584101. Editor. BASAVARAJ H